## ಮಾನ್ಯ ಮುಖ್ಯ ಮಂತ್ರಿಗಳ ಅಧ್ಯಕ್ಷತೆಯಲ್ಲಿ ನಡೆದ ಮಂಥನ–2 ಕಾರ್ಯಕ್ರಮದನ್ವಯ ಕೈಮಗ್ಗ ಮತ್ತು ಜವಳಿ ಇಲಾಖೆಯ ವಿಷನ್ 2020

**********

### ಪೀಠಿಕೆ

ಕರ್ನಾಟಕ ರಾಜ್ಯದಲ್ಲಿ ಕೈಮಗ್ಗ ನೇಕಾರಿಕೆಯು ಸಾಂಪ್ರದಾಯಕ ಗುಡಿ ಕೈಗಾರಿಕೆಯಾಗಿದ್ದು, ನೂರಾರು ವರ್ಷಗಳ ಭವ್ಯ ಇತಿಹಾಸವಿದೆ. ರಾಷ್ಟ್ರದಲ್ಲಿ ಕೃಷಿ ವಲಯದ ನಂತರ ಗ್ರಾಮಾಂತರ ಪ್ರದೇಶದಲ್ಲಿ ಉದ್ಯೋಗ ಒದಗಿಸುವ ನಿಟ್ಟಿನಲ್ಲಿ ಅಗ್ರಗಣ್ಯ ಸ್ಥಾನದಲ್ಲಿದೆ. ರಾಜ್ಯದಲ್ಲಿ 1995–96ರ



ಗಣತಿಯ ಪ್ರಕಾರ ಸುಮಾರು 75,000 ಕೈಮಗ್ಗಗಳು ಹಾಗೂ ಸುಮಾರು 88,000 ವಿದ್ಯುತ್‌ಮಗ್ಗಗಳು ಕಾರ್ಯನಿರ್ವಹಿಸುತ್ತಿವೆ. ಇದರಿಂದ ಈ ವಲಯಗಳಲ್ಲಿ ಸುಮಾರು 82,000 ಕುಟುಂಬಗಳು ಅವಲಂಬಿತವಾಗಿ 3 ಲಕ್ಷ ಜನರು ನೇಕಾರಿಕೆಯಲ್ಲಿ ತೊಡಗಿದ್ದರು. ಇತ್ತೀಚಿನ ಮಾದರಿ ಸಮೀಕ್ಷೆಯಂತೆ ರಾಜ್ಯದಲ್ಲಿ ಕೈಮಗ್ಗ ನೇಕಾರರ ಸಂಖ್ಯೆ ಸುಮಾರು 40000 ಹಾಗು ವಿದ್ಯುತ್ ಮಗ್ಗ ನೇಕಾರರ ಸಂಖ್ಯೆ 75000 ಇದೆ. ಅಂದರೆ ಉದ್ಯೋಗ ಒದಗಿಸುವ ನಿಟ್ಟಿನಲ್ಲಿ ವಸ್ತ್ರೋತ್ಪನ್ನ ಜವಳಿ ಕೈಗಾರಿಕೆಯು ಕ್ಷೀಣಿಸಿರುವುದನ್ನು ಮನಗಾಣಬಹುದಾಗಿದೆ. ತಂತ್ರಜ್ಞಾನದ ಉನ್ನತೀಕರಣದಿಂದಲೂ ಈ ಕ್ಷೇತ್ರದಲ್ಲಿ ಉದ್ಯೋಗ ಅವಕಾಶಗಳು ಕುಸಿದಿರುವ ಸಾಧ್ಯತೆಗಳನ್ನು ತಳ್ಳಿಹಾಕುವಂತಿಲ್ಲ.

ಆದರೆ ಸಿದ್ಧ ಉಡುಪು ವಲಯದಲ್ಲಿ ಕ್ರಾಂತಿಕಾರೀ ಬೆಳವಣಿಗೆಯಾಗಿದ್ದು ಅತೀ ಹೆಚ್ಚಿನ ಪ್ರಮಾಣದಲ್ಲಿ ಈ ಕೈಗಾರಿಕೆಯು ಉದ್ಯೋಗಾವಕಾಶಗಳನ್ನು ಒದಗಿಸಿದೆ. ಒಟ್ಟು ಸುಮಾರು



300000 ಮಂದಿಗೆ ಈ ಉದ್ದಿಮೆಯು ಉದ್ಯೋಗ ಒದಗಿಸಿದೆ. ರಾಜ್ಯದಲ್ಲಿ ಈ ಉದ್ದಿಮೆಯ ರಫ್ತು ಪರಿಮಾಣವು ರೂ. 3500 ಕೋಟಿ ಇದ್ದು ರಾಜ್ಯದ ರಫ್ತು ಪರಿಮಾಣದಲ್ಲಿ ಸಿಂಹಪಾಲನ್ನು ಈ ವಲಯವು ಪೂರೈಸುತ್ತಿದೆ. ಇತ್ತೀಚಿನ ಜಾಗತಿಕ ಆರ್ಥಿಕ ಹಿಂಜರಿತದ ತಾಪವು ಈ ವಲಯಕ್ಕೆ ಹೆಚ್ಚು ಪರಿಣಾಮ ಮಾಡದಿದ್ದರೂ ಸಹ ಸ್ವಲ್ಪ ಮಟ್ಟಿಗೆ ಅದರ ಬಿಸಿ ತಟ್ಟಿದೆ. ಈ ಪರಿಸ್ಥಿತಿಯಿಂದ ಚೇತರಿಕೆ ಉಂಟಾಗುತ್ತಿದ್ದು ಹೆಚ್ಚಿನ ಉದ್ಯೋಗಾವಕಾಶಗಳು ಮತ್ತೆ ಸ್ಥಾಪಿತವಾಗುವ ಲಕ್ಷಣಗಳು ಕಂಡುಬರುತ್ತಿವೆ. ಈ ವಲಯದಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ಸರಾಸರಿ ರೂ 3500 ಗಳ ಮಾಸಿಕ ವರಮಾನ ಲಭಿಸುತ್ತಿದೆ.




ಕೈಮಗ್ಗ ನೇಕಾರಿಕೆಯು ದೈಹಿಕ ಶ್ರಮದ ಕೈಗಾರಿಕೆಯಾಗಿದ್ದು, ಯುವ ಪೀಳಿಗೆಯಲ್ಲಿ ಈ ಉದ್ಯೋಗದಲ್ಲಿ ಹೆಚ್ಚಿನ ಆಸಕ್ತಿ ಕಂಡುಬರುತ್ತಿಲ್ಲ. ಈ ಉದ್ಯೋಗದಿಂದ ನೇಕಾರರ ಪ್ರತಿ ಕುಟುಂಬಕ್ಕೆ ಸರಾಸರಿ ರೇಷ್ಮೆ ನೇಕಾರಿಕೆಯಲ್ಲಿ ರೂ. 3,500 ರಿಂದ ರೂ. 4,500 ವರೆಗೆ, ಹತ್ತಿ ನೇಕಾರಿಕೆಯಲ್ಲಿ




ರೂ.1,500 ರಿಂದ ರೂ.2,000 ಹಾಗೂ ಉಣ್ಣೆ ನೇಕಾರಿಕೆಯಲ್ಲಿ ರೂ.1,000 ರಿಂದ ರೂ.1,500 ಮಾಸಿಕ ಆದಾಯ ದೊರೆಯುತ್ತಿದೆ. ಈ ಕಡಿಮೆ ಆದಾಯದಿಂದ ಜೀವನ ನಿರ್ವಹಣೆ ಕಷ್ಟ ಸಾಧ್ಯವಾಗುವುದರಿಂದ ದಿನೇ ದಿನೇ ಈ ಕೈಗಾರಿಕೆಯು ಕ್ಷೀಣಿಸುತ್ತಿದೆ. ಕೈಮಗ್ಗದ ರೇಷ್ಮೆ ಸೀರೆಗಳಿಗೆ ಮಾತ್ರ ಮರುಕಟ್ಟೆಯಲ್ಲಿ ಉತ್ತಮ ಬೇಡಿಕೆಯಿದ್ದು ರೇಷ್ಮೆ ಕೈಮಗ್ಗ ನೇಕಾರರು ನಿರಾತಂಕವಾಗಿ ಜೀವನ ಸಾಗಿಸುತ್ತಿದ್ದಾರೆ. ಗ್ರಾಮಾಂತರ ಪ್ರದೇಶದಲ್ಲಿ ಉದ್ಯೋಗ ಒದಗಿಸುತ್ತಿರುವ ಈ ಸಾಂಪ್ರದಾಯಿಕ ಗುಡಿ ಕೈಗಾರಿಕೆಯನ್ನು ನಿರುದ್ಯೋಗ ಸಮಸ್ಯೆ ಉಲ್ಬಣವಾಗದಂತೆ ಮಾಡುವ ದೃಷ್ಟಿಯಿಂದ ರಕ್ಷಿಸಿ ಪ್ರೋತ್ಸಾಹಿಸಿ ಬೆಳೆಸಲು ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ಹಲವಾರು ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿವೆ. ನೂರಾರು ವರ್ಷಗಳ ಪರಂಪರೆಯಿರುವ ಸಾಂಪ್ರದಾಯಿಕ ಕಸುಬನ್ನು ಪೋಷಿಸುವುದರ ಜೊತೆಗೆ ನಿರುದ್ಯೋಗ ಸಮಸ್ಯೆ ಉಲ್ಬಣವಾಗದಂತೆ ರಕ್ಷಿಸುವುದು ಇದರಿಂದ ಸಾಧ್ಯವಾಗುತ್ತಿದೆ.

ವಿದ್ಯುತ್‌ಮಗ್ಗ ಕೈಗಾರಿಕೆಯು ಗುಡಿ ಕೈಗಾರಿಕೆಯಾಗಿದ್ದರೂ ಸಹ ಸಂಘಟಿತ ವಲಯದಲ್ಲಿಯೂ ಸಹ ಸಾಕಷ್ಟು ಬೆಳವಣಿಗೆಯನ್ನು ಕಂಡಿದೆ. ಆದಾಗ್ಯೂ ಕಚ್ಚಾ ವಸ್ತುಗಳ ಬೆಲೆ ಏರಿಕೆ ಹಾಗು ಉತ್ಪಾದಿತ ವಸ್ತುಗಳ ಮಾರುಕಟ್ಟೆಯಲ್ಲಿ ಜಾಗತಿಕ ಪೈಪೋಟಿಯಿಂದಾಗಿ ನಿರೀಕ್ಷಿತ ಮಟ್ಟದಲ್ಲಿ ಅಭಿವೃದ್ಧಿ ಸಾಧಿಸಲು ಸಾಧ್ಯವಾಗಿರುವುದಿಲ್ಲ. ರಾಜ್ಯದಲ್ಲಿ ಇರುವ ಬಹುತೇಕ ವಿದ್ಯುತ್‌ಮಗ್ಗಗಳು ಸಾಧರಣ ಮಗ್ಗಗಳಾಗಿದ್ದು ಆಧುನೀಕರಣಗೊಳ್ಳದ ಕಾರಣ ಇದರಲ್ಲಿ ದುಡಿಯುವ ನೇಕಾರರ ಕುಟುಂಬದ ಸರಾಸರಿ ವರಮಾನವು ರೂ.4,000 ರಿಂದ ರೂ.5,000 ರವರೆಗೆ ಇರುತ್ತದೆ. ಈ ಕ್ಷೇತ್ರದಲ್ಲಿ ಗಣನೀಯ ಪ್ರಮಾಣದಲ್ಲಿ ಬೆಳವಣಿಗೆಯನ್ನು ಹೊಂದಲು ಹಾಲಿ ಇರುವ ತಾಂತ್ರಿಕತೆಯನ್ನು ಜಾಗತಿಕ ಪೈಪೋಟಿಗೆ ಸಜ್ಜಾಗುವಂತೆ ಉನ್ನತೀಕರಿಸುವ ಅವಶ್ಯಕತೆಯಿದೆ.

ಈ ಹಿನ್ನೆಲೆಯಲ್ಲಿ ಕೈಮಗ್ಗ ಮತ್ತು ವಿದ್ಯುತ್‌ಮಗ್ಗ ವಲಯಗಳನ್ನು ಬಲಪಡಿಸುವುದು, ಹಾಗು ಇದಕ್ಕೆ ಪೂರಕವಾಗಿರುವ ಮೌಲ್ಯ ಸರಪಳಿಯ ಇನ್ನಿತರ ಜವಳಿ ಚಟುವಟಿಕೆಗಳಾದ ಜಿನ್ನಿಂಗ್–ಪ್ರೆಸ್ಸಿಂಗ್, ಪ್ರೋಸೆಸಿಂಗ್, ಪ್ರಿಂಟಿಂಗ್, ಸಿದ್ಧ ಉಡುಪು ವಲಯಗಳನ್ನು ಪ್ರೋತ್ಸಾಹಿಸುವುದು ಇಲಾಖೆಯ ಪ್ರಮುಖ ಉದ್ದೇಶವಾಗಿದೆ. ಇದಕ್ಕಾಗಿ ಇಲಾಖೆಯ ದೃಷ್ಟಿಕೋನ (ವಿಷನ್) ಇಂತಿದೆ.



| | |
|---|---|
|  | • ಇಲಾಖೆಯು ಮುಂದಿನ ಹತ್ತು ವರ್ಷಗಳಲ್ಲಿ ಹಾಲಿ ನೇಕಾರಿಕೆಯಲ್ಲಿ ನಿರತರಾಗಿರುವವರಿಗೆ ಅವರ ಉದ್ಯೋಗವನ್ನು ಉತ್ಸಾಹದಿಂದ ಮುಂದುವರಿಸಲು ಉತ್ತಮ ಪರಿಸರವನ್ನು ಕಲ್ಪಿಸುವುದು. |
|  | • ರಾಜ್ಯದ ಎಲ್ಲಾ ನೇಕಾರರಿಗೆ ತಮ್ಮ ಉದ್ಯೋಗವನ್ನು ಉತ್ತಮ ಪರಿಸರದಲ್ಲಿ ಮುಂದುವರಿಸಲು ಅನುಕೂಲವಾಗುವಂತೆ ವಸತಿ ಕಾರ್ಯಾಗಾರಗಳನ್ನು ಒದಗಿಸುವುದು. |
|  | • ರೇಷ್ಮೆ ವಲಯದ ನೇಕಾರರಿಗೆ ಆಧುನಿಕ ಯಂತ್ರೋಪಕರಣಗಳನ್ನು ಕೇಂದ್ರ ಸರ್ಕಾರದ ಕೆಟಲಿಟಿಕ್ ಡೆವಲಪ್‌ಮೆಂಟ್ ಯೋಜನೆಯ ಸಹಯೋಗದೊಂದಿಗೆ ಒದಗಿಸುವುದು. |
|  | • ನಿರುದ್ಯೋಗಿಗಳಿಗೆ ವಿಶೇಷವಾಗಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ನೇಕಾರಿಕೆಯಲ್ಲಿ ತರಬೇತಿ ನೀಡಿ ಈ ಉದ್ಯೋಗದಲ್ಲಿ ತೊಡಗಲು ಎಲ್ಲಾ ಹಂತದಲ್ಲಿ ಸಹಕಾರ ನೀಡುವುದು. |

| | |
|---|---|
|  | • ಹತ್ತಿವಲಯದ ಕೈಮಗ್ಗ ನೇಕಾರರಿಗೆ ನಿರಂತರವಾಗಿ ಉತ್ತಮ ಗುಣಮಟ್ಟದ ಕಚ್ಚಾ ಮಾಲು ಸುಲಭ ಬೆಲೆಯಲ್ಲಿ ದೊರೆಯುವಂತೆ ಮಾಡಲು ಜಿನ್ನಿಂಗ್, ಪ್ರೆಸಿಂಗ್, ಸ್ಪಿನಿಂಗ್ ಕ್ಷೇತ್ರವನ್ನು ಆಧುನೀಕರಿಸುವುದು. |
|  | • ವಿದ್ಯುತ್‌ಮಗ್ಗ ನೇಕಾರರು ಜಾಗತಿಕ ಪೈಪೋಟಿ ಎದುರಿಸುವ ಸಲುವಾಗಿ ಉತ್ಪಾದನಾ ವೆಚ್ಚ ತಗ್ಗಿಸಲು ಸಹಕಾರಿಯಾಗುವಂತೆ ರಿಯಾಯಿತಿ ದರದಲ್ಲಿ ವಿದ್ಯುತ್ ಸರಬರಾಜು ಮಾಡುವುದರ ಜೊತೆಗೆ ಕೇಂದ್ರ ಸರ್ಕಾರದ ತಂತ್ರಜ್ಞಾನ ಉನ್ನತೀಕರಣ ನಿಧಿ ಯೋಜನೆಯ ಲಾಭ ಪಡೆದು ಈ ಕ್ಷೇತ್ರವನ್ನು ಆಧುನೀಕರಣಗೊಳಿಸುವುದು ಹಾಗು ಉತ್ತಮ ಗುಣಮಟ್ಟದ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವುದು. |
|  | • ನೇಕಾರರಿಗೆ ಸಾಮಾಜಿಕ ಭದ್ರತೆ ಒದಗಿಸುವುದರೊಂದಿಗೆ ನೇಕಾರರ ಮಕ್ಕಳ ಶಿಕ್ಷಣ ಮುಂದುವರಿಸಲು ಸಹಕಾರ ನೀಡುವುದು. ನೇಕಾರರಿಗೆ ಆರೋಗ್ಯ ಭದ್ರತೆ ಒದಗಿಸುವುದು. |
|   | • ರಫ್ತಿನ ಪರಿಮಾಣದಲ್ಲಿ ಮಾಹಿತಿ ತಂತ್ರಜ್ಞಾನದ ನಂತರದ ಪ್ರಮುಖ ಸ್ಥಾನದಲ್ಲಿರುವ ಸಿದ್ಧ ಉಡುಪು ಕ್ಷೇತ್ರವನ್ನು ಬಲಪಡಿಸುವುದು. |

ಈ ದೃಷ್ಟಿಕೋನವನ್ನು ಸಾಕಾರಗೊಳಿಸಲು ವಲಯವಾರು ಇರುವ ಉತ್ತೇಜಕ ಸಾಮರ್ಥ್ಯಗಳು, ದೌರ್ಬಲ್ಯಗಳು, ಅವಕಾಶಗಳು ಹಾಗು ಹಿಂಜರಿಕೆಗಳನ್ನು ಅವಲೋಕಿಸಿ ಅಭಿವೃದ್ಧಿಗೆ ಪೂರಕವಾಗಿ ಕಾರ್ಯಕ್ರಮಗಳನ್ನು ಮಾರ್ಪಡಿಸಿಕೊಳ್ಳಬೇಕಾಗುತ್ತದೆ. ಅನವಶ್ಯಕವಾದ ಹಾಗು ಇಂದಿನ ಪರಿಸ್ಥಿತಿಗೆ ಅಪ್ರಸ್ತುತವಾದ ಕಾರ್ಯಕ್ರಮಗಳನ್ನು ರದ್ದುಗೊಳಿಸಿ ಅವಶ್ಯವೆನಿಸುವ ಹೊಸ ಕಾರ್ಯಕ್ರಮಗಳನ್ನು ರೂಪಿಸಿ ಜಾರಿಗೆ ತರಬೇಕಾಗುತ್ತದೆ. ಇದಕ್ಕಾಗಿ ಈ ಮುಂದಿನ ಪ್ರಮುಖ ವಲಯಗಳನ್ನು ಗುರುತಿಸಲಾಗಿದೆ.

1. ಮೂಲಭೂತ ಸೌಕರ್ಯ.





2. ಉತ್ಪಾದನೆ.




3. ಸಂಸ್ಕರಣೆ.



4. ಮಾರುಕಟ್ಟೆ.



# 1. ಮೂಲಭೂತ ಸೌಕರ್ಯಗಳು.

**ರಾಜ್ಯದಲ್ಲಿ ಜವಳಿ ಕ್ಷೇತ್ರದಲ್ಲಿ ಇರುವ ಮೂಲಭೂತ ಸೌಕರ್ಯಗಳ ಚಿತ್ರಣ ಇಂತಿದೆ.**

**ಅ. ಕೈಮಗ್ಗ ವಲಯ –**

1. **ಮಗ್ಗ ಮತ್ತು ಸಲಕರಣೆಗಳು :** ಕೈಮಗ್ಗ ವಲಯದಲ್ಲಿ ಕೆಲಸ ಮಾಡುತ್ತಿರುವ ರೇಷ್ಮೆ ನೇಕಾರರು



ಉತ್ತಮ ತಂತ್ರಜ್ಞಾನವಿರುವ ಕೈಮಗ್ಗಗಳನ್ನು ಹೊಂದಿರುತ್ತಾರೆ. ಹತ್ತಿ ಬಟ್ಟೆ ಉತ್ಪಾದನೆಗೆ ಅವಶ್ಯವಿರುವ ಕೈಮಗ್ಗಗಳನ್ನು ಹತ್ತಿ ನೇಕಾರರು ಹೊಂದಿದ್ದು ಇವುಗಳಲ್ಲಿ ಉತ್ಪಾದನೆಯ ವೇಗವನ್ನು ಹೆಚ್ಚಿಸಲು ಅವಶ್ಯವಿರುವ ಕೆಲವು ತಂತ್ರಜ್ಞಾನವನ್ನು ಅಳವಡಿಸುವುದು ಅವಶ್ಯವಿದೆ. ಉಣ್ಣೆವಲಯದಲ್ಲಿ ಕೆಲಸ ಮಾಡುತ್ತಿರುವ ನೇಕಾರರು ಬಹಳ ಹಳೆಯ ಮಾದರಿಯ ಕುಣಿ ಮಗ್ಗಗಳಲ್ಲಿ ನೇಕಾರಿಕೆ ಮಾಡುತ್ತಿದ್ದು ಇವುಗಳನ್ನು ಸಂಪೂರ್ಣ ಬದಲಾಯಿಸಿ ಹೊಸ ಮಾದರಿಯ ಕೈಮಗ್ಗಗಳನ್ನು ಒದಗಿಸುವುದು ಅವಶ್ಯವಿರುತ್ತದೆ.


2. **ವಸತಿ ಕಾರ್ಯಗಾರಗಳು :** ರೇಷ್ಮೆ ಮತ್ತು ಹತ್ತಿ ವಲಯದ ಕೈಮಗ್ಗ ನೇಕಾರರಿಗೆ ಅವರ ಉದ್ಯೋಗವನ್ನು ಸುಗಮವಾಗಿ ಮುಂದುವರಿಸಲು ಸಾಕಾಗುವಷ್ಟು ಸ್ಥಳಾವಕಾಶವಿರುವ ಮನೆಗಳ ಕೊರತೆಯಿದೆ. ಉಣ್ಣೆ ವಲಯದ ನೇಕಾರರು ಆರ್ಥಿಕವಾಗಿ ಬಹಳ ಹಿಂದುಳಿದಿದ್ದು ಬಹಳ ಹಳೆಯ ಮನೆಗಳನ್ನು ಹೊಂದಿರುತ್ತಾರೆ. ಅವರ ಉದ್ಯೋಗ ಮುಂದುವರಿಸಲು ಉತ್ತಮ ಪರಿಸರ ನಿರ್ಮಿಸುವುದು ಅವಶ್ಯವಿದೆ.

**ಮುನ್ನೋಟ:**

**"ರಾಜ್ಯದಲ್ಲಿರುವ ಎಲ್ಲ ಕೈಮಗ್ಗ ನೇಕಾರರಿಗೆ 2020 ರ ವೇಳೆಗೆ ಅಗತ್ಯ ಸುಧಾರಿತ ಮಗ್ಗ, ಪರಿಕರಗಳನ್ನು ಹಾಗು ವಸತಿ ಕಾರ್ಯಾಗಾರಗಳನ್ನು ಒದಗಿಸುವುದು."**



**2020**



ಕೈಮಗ್ಗ ನೇಕಾರರಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಇಲಾಖೆಯಲ್ಲಿ ಈ ಮುಂದಿನ ಯೋಜನೆಗಳಿವೆ. ಇಂದಿನ ನೇಕಾರರ ಪರಿಸ್ಥಿತಿಯನ್ನು ಗಮನದಲ್ಲಿರಿಸಿಕೊಂಡು ಈ ಯೋಜನೆಗಳಲ್ಲಿ ತರಬಹುದಾದ ಮಾರ್ಪಾಡುಗಳನ್ನು ಅವುಗಳ ಮುಂದೆ ಕಾಣಿಸಲಾಗಿದೆ.



**1. ಜಿಲ್ಲಾ ವಲಯ ಕೈಮಗ್ಗ ಆಧುನೀಕರಣ ಯೋಜನೆ :** ಈ ಯೋಜನೆಯಡಿ ಕೈಮಗ್ಗ ನೇಕಾರರು ತಮ್ಮ ಕೈಮಗ್ಗಗಳನ್ನು ಆಧುನೀಕರಿಸಿಕೊಳ್ಳಲು ಸಂಘಗಳ ಮೂಲಕ ಅಲ್ಪ ಪ್ರಮಾಣದ ಆರ್ಥಿಕ ಸಹಾಯ ಒದಗಿಸಲಾಗುತ್ತಿದೆ. ಅದುದರಿಂದ ಈ ಯೋಜನೆ ಹೆಚ್ಚು ಪರಿಣಾಮಕಾರಿಯಾಗಿಲ್ಲ.

**ಯೋಜನೆಯಲ್ಲಿ ತರಬಹುದಾದ ಬದಲಾವಣೆ :** ಈ ಯೋಜನೆಯನ್ನು ಮಾರ್ಪಡಿಸಿ ಸಂಘಟಿತ ಹಾಗು ಅಸಂಘಟಿತ ವಲಯದ ನೇಕಾರರಿಗೆ ಅವಶ್ಯಕತೆಯನ್ನಾಧರಿಸಿ ಹೊಸ ಮಗ್ಗ ಮತ್ತು ಸಲಕರಣೆಗಳನ್ನು ಒದಗಿಸಲು ಈ ಮುಂದಿನಂತೆ ನೆರವು ನೀಡಬಹುದಾಗಿದೆ.

ಅ) ರೇಷ್ಮೆ ನೇಕಾರರಿಗೆ – ರೂ 1.00 ಲಕ್ಷ.
ಆ) ಹತ್ತಿ ನೇಕಾರರಿಗೆ – ರೂ 0.75 ಲಕ್ಷ.
ಇ) ಉಣ್ಣೆ ನೇಕಾರರಿಗೆ – ರೂ 0.50 ಲಕ್ಷ.

ಹೀಗೆ ಮಾಡುವುದರಿಂದ ಆಧುನಿಕ ಕೈಮಗ್ಗಗಳನ್ನು ಹೊಂದಿ ಉತ್ತಮ ಲಾಭ ತರುವ ಉತ್ಪನ್ನಗಳನ್ನು ತಯಾರಿಸಲು ಅವರಿಗೆ ಅನುವು ಮಾಡಿಕೊಟ್ಟಂತಾಗುತ್ತದೆ. ಇದರಿಂದ ಉತ್ತೇಜಿತರಾಗಿ ಹೆಚ್ಚು ಹೆಚ್ಚು ಜನರು ನೇಕಾರಿಕೆ ಕಸುಬನ್ನು ಆಶ್ರಯಿಸುತ್ತಾರೆ. ಇದರಿಂದ ನಿರುದ್ಯೋಗ ಸಮಸ್ಯೆಯನ್ನು ಹಿಮ್ಮೆಟ್ಟಿಸುವುದು ಸಾಧ್ಯವಾಗುತ್ತದೆ.

**ಯೋಜನೆಯ ಫಲ :**

- ನೇಕಾರರಿಗೆ ಸಾಮಾಜಿಕ ಭದ್ರತೆ.
- ಸಾಂಪ್ರದಾಯಿಕ ನೇಯ್ಗೆ ಉದ್ಯೋಗ ಮುಂದುವರೆಸಲು ಉತ್ತಮ ಪರಿಸರ.
- ಕರ್ನಾಟಕದ ಭವ್ಯ ಪರಂಪರೆಯ ರಕ್ಷಣೆ.
- ಉತ್ಪಾದನೆಯಲ್ಲಿ ಹೆಚ್ಚಳ.
- ಉದ್ಯೋಗ ಮುಂದುವರೆಸಲು ಪ್ರೋತ್ಸಾಹ.

## 2. ವಸತಿ ಕಾರ್ಯಾಗಾರ ಯೋಜನೆ :

**ಉದ್ದೇಶ:** ಕೈಮಗ್ಗ, ವಿದ್ಯುತ್‌ಮಗ್ಗ ಮತ್ತು ಮಗ್ಗಪೂರ್ವ ಚಟುವಟಿಕೆಗಳಲ್ಲಿ ನಿರತರಾಗಿರುವ ವಸತಿರಹಿತ ನೇಕಾರರನ್ನು ಗುರುತಿಸಿ ಮುಂದಿನ ವರ್ಷಗಳಲ್ಲಿ ಅವರ ಸಾಮಾಜಿಕ ಭದ್ರತೆಗಾಗಿ ಒಂದು ಖಾಯಂ ನೆಲೆ ಕಲ್ಪಿಸಿ 2020ರ ವೇಳೆಗೆ



**"ರಾಜ್ಯದಲ್ಲಿ ಸೂರಿಲ್ಲದ ನೇಕಾರರಿಲ್ಲ"**

ಎಂಬ ಘೋಷಣೆಯನ್ನು ಸಾಕಾರಪಡಿಸುವುದು.

ಕೇಂದ್ರ ಸರ್ಕಾರವು ಕೈಮಗ್ಗ ನೇಕಾರರಿಗೆ ಒದಗಿಸುತ್ತಿದ್ದ ವಸತಿ ಕಾರ್ಯಾಗಾರ ಯೋಜನೆಯನ್ನು ಸ್ಥಗಿತಗೊಳಿಸಿದೆ. ರಾಜ್ಯ ಸರ್ಕಾರದಿಂದ ನೇಕಾರರ ಆಶ್ರಯ ಎಂಬ ಯೋಜನೆಯನ್ನು ರೂಪಿಸಿ ರೂ 5000/– ಗಳ ಸಹಾಯಧನ, ರೂ 15000/– ರಾಜೀವಗಾಂಧಿ ನಿಗಮದ ಸಾಲ ಹಾಗು ರೂ 15000/–ಗಳ ನಿಗಮದ ಸಹಾಯಧನದೊಂದಿಗೆ ಅನುಷ್ಠಾನಗೊಳಿಸಲಾಗುತ್ತಿದೆ. ಈ ಅನುದಾನವು ವಸತಿ ಕಾರ್ಯಾಗಾರಗಳನ್ನು ನಿರ್ಮಿಸಲು ಸಾಕಾಗುತ್ತಿಲ್ಲ. ಜೊತೆಗೆ ನೇಕಾರರ ಆರ್ಥಿಕ ಪರಿಸ್ಥಿತಿಯು ದುರ್ಬಲವಾಗಿರುವುದರಿಂದ ಸಾಲ ಮರುಪಾವತಿಯ ಸಾಮರ್ಥ್ಯವಿರುವುದಿಲ್ಲ. ಆದ್ದರಿಂದ ಈ ಯೋಜನೆ ಪರಿಣಾಮಕಾರಿಯಾಗಿ ಅನುಷ್ಠಾನವಾಗಿಲ್ಲ.

**ಯೋಜನೆಯಲ್ಲಿ ತರಬಹುದಾದ ಬದಲಾವಣೆ :** ಈ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರದ ವತಿಯಿಂದ ರೂಪಿಸಿರುವ ನೇಕಾರರ ಆಶ್ರಯ ಯೋಜನೆಯನ್ನು ರೂ.60,000 ಗಳ ಸಹಾಯಧನದ ನೆರವಿನೊಂದಿಗೆ ರೂ. 65,000 ಗಳ ಘಟಕ ವೆಚ್ಚದಲ್ಲಿ ಅನುಷ್ಠಾನಗೊಳಿಸಬಹುದಾಗಿದೆ. ಇದರಿಂದ ನೇಕಾರರಿಗೆ ತಮ್ಮ ಉದ್ಯೋಗ ಮುಂದುವರಿಸಲು ಉತ್ತಮ ಪರಿಸರ ನಿರ್ಮಾಣವಾಗಲಿದ್ದು, ಅವರ ಉತ್ಪಾದನಾ ಸಾಮರ್ಥ್ಯ ಹೆಚ್ಚಾಗುತ್ತದೆ. ನೇಕಾರರ ಆರ್ಥಿಕ ಪರಿಸ್ಥಿತಿಯಲ್ಲಿ ಸುಧಾರಣೆ ಕಾಣಬಹುದಾಗಿದೆ.

**ಯೋಜನೆಯ ಫಲ :**

- ನೇಕಾರರಿಗೆ ಸಾಮಾಜಿಕ ಭದ್ರತೆ.
- ಸಾಂಪ್ರದಾಯಿಕ ನೇಯ್ಗೆ ಉದ್ಯೋಗ ಮುಂದುವರೆಸಲು ಉತ್ತಮ ಪರಿಸರ.
- ಉತ್ಪಾದನೆಯಲ್ಲಿ ಹೆಚ್ಚಳ.
- ಉದ್ಯೋಗ ಮುಂದುವರೆಸಲು ಪ್ರೋತ್ಸಾಹ.
- ಒತ್ತಡ ನಿವಾರಣೆಯಿಂದ ಆರೋಗ್ಯ ಸುಧಾರಣೆ.

**ಆ. ವಿದ್ಯುತ್‌ಮಗ್ಗ ವಲಯ** –

1. **ಮಗ್ಗ ಮತ್ತು ಸಲಕರಣೆಗಳು :** ವಿದ್ಯುತ್‌ಮಗ್ಗ ವಲಯದಲ್ಲಿ ಕೆಲಸ ಮಾಡುತ್ತಿರುವ ನೇಕಾರರು



ಸಾದ ಮಗ್ಗಗಳನ್ನು ಹೊಂದಿದ್ದು ಇವುಗಳಲ್ಲಿ ಹೆಚ್ಚಿನ ಉತ್ಪಾದನಾ ಸಾಮರ್ಥ್ಯ ಇರುವುದಿಲ್ಲ. ಆದುದರಿಂದ ಉತ್ತಮ ತಂತ್ರಜ್ಞಾನವಿರುವ ಹಾಗೂ ಹೆಚ್ಚು ಉತ್ಪಾದನಾ ಸಾಮರ್ಥ್ಯವಿರುವ ಮಗ್ಗಗಳನ್ನು ಒದಗಿಸುವುದು ಅವಶ್ಯವಿರುತ್ತದೆ.

**ಮುನ್ನೋಟ:**



**"ರಾಜ್ಯದಲ್ಲಿರುವ ಎಲ್ಲ ವಿದ್ಯುತ್ ಮಗ್ಗ ನೇಕಾರರಿಗೆ 2020 ರ ವೇಳೆಗೆ ಅಗತ್ಯ ಆಧುನಿಕ ಮಗ್ಗ, ಪರಿಕರಗಳನ್ನು ಒದಗಿಸಿ ಈ ಕ್ಷೇತ್ರವನ್ನು ಜಾಗತಿಕ ಪೈಪೋಟಿಗೆ ಸಶಕ್ತವಾಗಿಸುವುದು."**

ವಿದ್ಯುತ್‌ಮಗ್ಗ ನೇಕಾರರಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಇಲಾಖೆಯಲ್ಲಿ ಈ ಮುಂದಿನ ಯೋಜನೆಗಳಿವೆ. ಇಂದಿನ ನೇಕಾರರ ಪರಿಸ್ಥಿತಿಯನ್ನು ಗಮನದಲ್ಲಿರಿಸಿಕೊಂಡು ಈ ಯೋಜನೆಗಳಲ್ಲಿ ತರಬಹುದಾದ ಮಾರ್ಪಾಡುಗಳನ್ನು ಅವುಗಳ ಮುಂದೆ ಕಾಣಿಸಲಾಗಿದೆ.

**1) ತಾಂತ್ರಿಕತೆ ಉನ್ನತೀಕರಣ ಯೋಜನೆಯಡಿ ವಿದ್ಯುತ್‌ಮಗ್ಗ ಘಟಕಗಳ ಆಧುನೀಕರಣ.**



ಕೇಂದ್ರ ಸರ್ಕಾರವು ವಿದ್ಯುತ್‌ಮಗ್ಗ ವಲಯವನ್ನು ಆಧುನೀಕರಣಗೊಳಿಸಿ ಜಾಗತಿಕ ಮಟ್ಟದಲ್ಲಿ ದೇಶದ ವಿದ್ಯುತ್‌ಮಗ್ಗಗಳು ಪೈಪೋಟಿಗೆ ಸನ್ನದ್ಧರಾಗಿರುವಂತೆ ಮಾಡಲು ತಾಂತ್ರಿಕತೆ ಉನ್ನತೀಕರಣ ಯೋಜನೆಯನ್ನು ಕಳೆದ ಹತ್ತು ವರ್ಷಗಳಿಂದ ಅನುಷ್ಠಾನಗೊಳಿಸುತ್ತಿದೆ. ಈ ಯೋಜನೆಯಡಿ ಸಹಾಯ ಪಡೆಯಲು ಕೇಂದ್ರ ಸರ್ಕಾರವು ಉತ್ಕೃಷ್ಟ ಮಾದರಿಯ ಕೆಲವು ಯಂತ್ರೋಪಕರಣಗಳನ್ನು ನಿಗದಿಪಡಿಸಿದೆ. ಅಂತಹ

ಆಧುನಿಕ ಯಂತ್ರೋಪಕರಣಗಳನ್ನು ಅಳವಡಿಸಿಕೊಂಡ ಘಟಕಗಳಿಗೆ ಮಾತ್ರ ಈ ಯೋಜನೆಯಡಿ ಸಹಾಯಧನ ಲಭ್ಯವಿದೆ. ಇದರ ಪೂರ್ಣ ಪ್ರಮಾಣದ ಪ್ರಯೋಜನ ಪಡೆದು **ರಾಜ್ಯದ ವಿದ್ಯುತ್‌ಮಗ್ಗ ಕ್ಷೇತ್ರವನ್ನು ಆಧುನೀಕರಣಗೊಳಿಸಿ ಅಭಿವೃದ್ಧಿಪಡಿಸುವುದು ಇಲಾಖೆಯ ಗುರಿ.**

ಹಾಗೆಯೇ ಈ ಯೋಜನೆಯ ಸಹಾಯದಿಂದ ಸ್ಪಿನ್ನಿಂಗ್, ಬಟ್ಟೆ ಸಂಸ್ಕರಣೆ, ಮತ್ತು ಸಿದ್ಧಉಡುಪು ಕ್ಷೇತ್ರಗಳಲ್ಲಿಯೂ ಸಹ ಹೆಚ್ಚಿನ ಬಂಡವಾಳ ಹೂಡಿಕೆಯನ್ನು ಆಕರ್ಷಿಸಿ 2020 ರ ವೇಳೆಗೆ ರಾಜ್ಯದ ಜವಳಿ ಕ್ಷೇತ್ರವನ್ನು ಆಧುನಿಕ ಹಾಗು ಸದೃಢವಾಗಿ ಸ್ಥಾಪಿಸಲಾಗುವುದು.


ಈ ಯೋಜನೆಯಡಿ ಕರ್ನಾಟಕದ ಹಲವು ಘಟಕಗಳು ಪ್ರಯೋಜನ ಪಡೆದಿವೆ. ಈ ಯೋಜನೆಯ ಲಾಭ ಪಡೆಯಲು ಉತ್ತಮ ತಂತ್ರಜ್ಞಾನದ ಯಂತ್ರೋಪಕರಣಗಳನ್ನು ಅಳವಡಿಸುವುದು ಅವಶ್ಯವಿದ್ದು ಈ ರೀತಿಯ ತಂತ್ರಜ್ಞಾನ ಉನ್ನತೀಕರಣಕ್ಕೆ ಬಂಡವಾಳ ಹೂಡಲು ರಾಜ್ಯದ ನೇಕಾರರಲ್ಲಿ ಮಾರುಕಟ್ಟೆ ಬಗೆಗಿನ ಅನಿಶ್ಚಿತತೆ ಮತ್ತು ಅಧೈರ್ಯ ತಡೆಯಾಗುತ್ತಿದೆ.

ಈ ಯೋಜನೆಯಡಿ ಈವರೆಗೆ ಅನುದಾನ ಪಡೆದಿರುವ ಘಟಕಗಳ ಸಂಖ್ಯೆ ಮತ್ತು ಮುಂದಿನ ಮೂರು ವರ್ಷಗಳಿಗೆ ನಿಗದಿಪಡಿಸಿಕೊಂಡ ಗುರಿ ಇಂತಿದೆ.

(ರೂ ಕೋಟಿಗಳಲ್ಲಿ)

| **ತಾಂತ್ರಿಕತೆ ಉನ್ನತೀಕರಣ ಯೋಜನೆಯಡಿ ಧನಸಹಾಯ ಪಡೆದಿರುವ ಘಟಕಗಳ ಸಂಖ್ಯೆ** | | **ಮುಂದಿನ 3 ವರ್ಷಗಳಲ್ಲಿ ಈ ಯೋಜನೆಯಡಿ ನಿಗದಿಪಡಿಸಿಕೊಂಡ ಗುರಿ** | | | | | |
|---|---|---|---|---|---|---|---|
| | | **2010–11** | | **2011–12** | | **2012–13** | |
| **ಘಟಕಗಳು** | **ಪಡೆದ ಸಹಾಯಧನ** | **ಘಟಕಗಳು** | **ಬಂಡವಾಳ ಹೂಡಿಕೆ** | **ಘಟಕಗಳು** | **ಬಂಡವಾಳ ಹೂಡಿಕೆ** | **ಘಟಕಗಳು** | **ಬಂಡವಾಳ ಹೂಡಿಕೆ** |
| 269 | 64.43 | 20 | 1200.00 | 25 | 1500.00 | 30 | 1800.00 |

**ಯೋಜನೆಯಲ್ಲಿ ತರಬಹುದಾದ ಬದಲಾವಣೆ :** ಈ ಯೋಜನೆಯು ಕೇಂದ್ರ ಸರ್ಕಾರದ ಯೋಜನೆಯಾಗಿದ್ದು ಪ್ರಚಾರದ ಕೊರತೆ ಹಾಗು ಹಣಕಾಸು ಸಂಸ್ಥೆಗಳ ಅಸಹಕಾರದಿಂದ ಹೆಚ್ಚು ಪರಿಣಾಮಕಾರಿಯಾಗಿ ಅನುಷ್ಠಾನವಾಗುತ್ತಿಲ್ಲ. ಈ ಹಿನ್ನೆಲೆಯಲ್ಲಿ ಈ ಯೋಜನೆಗೆ ಹೆಚ್ಚು ಪ್ರಚಾರ ಒದಗಿಸುವುದರ ಜೊತೆಗೆ ಈ ಯೋಜನೆಯಡಿ ಸಾಲ ಒದಗಿಸಲು ಬ್ಯಾಂಕ್ ಮತ್ತು ಹಣಕಾಸು ಸಂಸ್ಥೆಗಳಿಗೆ ಗುರಿ ನಿಗದಿಪಡಿಸಿ **2020 ರ ವೇಳೆಗೆ ರಾಜ್ಯದಲ್ಲಿ 500 ಅತ್ಯಾಧುನಿಕ ವಿದ್ಯುತ್ ಮಗ್ಗ ಘಟಕಗಳನ್ನು ಸ್ಥಾಪಿಸಲಾಗುವುದು.** ಆ ಮೂಲಕ ಸುಮಾರು 5000 ಕೋಟಿ ಬಂಡವಾಳ ಆಕರ್ಷಿಸಿ 25000 ಜನರಿಗೆ ನೇರ ಉದ್ಯೋಗ ಒದಗಿಸಲಾಗುವುದು.



**ಯೋಜನೆಯ ಫಲ :**

- ರಾಜ್ಯದಲ್ಲಿನ ಜವಳಿ ಕ್ಷೇತ್ರದ ತಂತ್ರಜ್ಞಾನದ ಉನ್ನತೀಕರಣ.
- ಬಂಡವಾಳ ಆಕರ್ಷಣೆ.
- ಹಣಕಾಸು ಸಂಸ್ಥೆಗಳಿಂದ ದೊರೆಯುವ ಸಾಲ ಸೌಲಭ್ಯದ ಬಳಕೆ.
- ಜಾಗತಿಕ ಮಾರುಕಟ್ಟೆ ಪೈಪೋಟಿಗೆ ಸಜ್ಜಾದ ಜವಳಿ ಕ್ಷೇತ್ರ.
- ರಾಜ್ಯ ರಫ್ತು ಪ್ರಮಾಣದಲ್ಲಿ ಗಣನೀಯ ಹೆಚ್ಚಳ.
- ರಾಜ್ಯದ ಆರ್ಥಿಕ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರ.

## 2. ರಾಜ್ಯ ವಲಯ ವಿದ್ಯುತ್‌ಮಗ್ಗ ಆಧುನೀಕರಣ ಯೋಜನೆ :



ಈ ಯೋಜನೆಯಡಿ ವಿದ್ಯುತ್‌ಮಗ್ಗ ನೇಕಾರರು ತಮ್ಮ ವಿದ್ಯುತ್ ಮಗ್ಗಗಳನ್ನು ಆಧುನೀಕರಿಸಿಕೊಳ್ಳಲು ಸಂಘಗಳ ಮೂಲಕ ಹಣಕಾಸಿನ ನೆರವು ಒದಗಿಸಲಾಗುತ್ತಿದೆ. ಈ ಯೋಜನೆಯನ್ನು ಮುಂದುವರಿಸಿ ಪರಿಣಾಮಕಾರಿಯಾಗಿ ಅನುಷ್ಠಾನ ಗೊಳಿಸುವುದರಿಂದ ನೇಕಾರರು ಆಧುನಿಕ ವಿದ್ಯುತ್‌ಮಗ್ಗಗಳನ್ನು ಹೊಂದಿ ಉತ್ತಮ ಲಾಭ ತರುವ ಉತ್ಪನ್ನಗಳನ್ನು ತಯಾರಿಸಲು ಅವರಿಗೆ ಅನುವು ಮಾಡಿಕೊಟ್ಟಂತಾಗುತ್ತದೆ. ಇದಕ್ಕೆ **ತಾಂತ್ರಿಕತೆ ಉನ್ನತೀಕರಣ ಯೋಜನೆ (TUF) ಯಡಿ ಕೇಂದ್ರ ಸರ್ಕಾರದಿಂದಲೂ ಆರ್ಥಿಕ ಸಹಾಯ ದೊರೆಯುವುದರಿಂದ** ರಾಜ್ಯದ ವಿದ್ಯುತ್ ಮಗ್ಗ ವಲಯವನ್ನು ಜಾಗತಿಕ ಮಟ್ಟದ ಮಾರುಕಟ್ಟೆಗೆ ಸಜ್ಜುಗೊಳಿಸಲು ಸಹಾಯಕವಾಗುತ್ತದೆ. ಇದರಿಂದ ಉತ್ತೇಜಿತರಾಗಿ ಹೆಚ್ಚು ಹೆಚ್ಚು ಜನರು ನೇಕಾರಿಕೆ ಕಸುಬನ್ನು ಆಶ್ರಯಿಸುತ್ತಾರೆ. ಇದರಿಂದ ನಿರುದ್ಯೋಗ ಸಮಸ್ಯೆಯನ್ನು ಹಿಮ್ಮೆಟ್ಟಿಸುವುದು ಸಾಧ್ಯವಾಗುತ್ತದೆ.

**ಯೋಜನೆಯಲ್ಲಿ ತರಬಹುದಾದ ಬದಲಾವಣೆ :** ಈ ಯೋಜನೆಯಲ್ಲಿ ಒದಗಿಸಲಾಗುತ್ತಿರುವ ಅನುದಾನದ ಪ್ರಮಾಣವನ್ನು ಇಂದಿನ ಅವಶ್ಯಕತೆಗನುಗುಣವಾಗಿ ಈ ಮುಂದಿನಂತೆ ಹೆಚ್ಚಿಸಿ ಪರಿಷ್ಕರಿಸಬಹುದಾಗಿದೆ.



| | | |
|---|---|---|
| 1 | ಜಕಾರ್ಡ್, ಆಟೋ ಲೆಟ್‌ಆಫ್, ಫರ್ನ್ ಫೀಡರ್, ಶಟ್ಲ್ ಚೇಂಜರ್, ವಾಪ್ ಸ್ಟಾಪ್ ಇತ್ಯಾದಿ ತಂತ್ರಜ್ಞಾನ ಅಳವಡಿಸಿಕೊಳ್ಳುವ ನೇಕಾರರಿಗೆ ಮಗ್ಗ ಒಂದಕ್ಕೆ | ನೈಜ ವೆಚ್ಚ. ಗರಿಷ್ಠ ರೂ 1.00 ಲಕ್ಷ. |
| 2 | ಆಟೋ ಲೂಮ್ಸ್, ರೇಪಿಯರ್ ಮುಂತಾದ ಶಟ್ಲ್‌ಲೆಸ್ ಮಗ್ಗಗಳನ್ನು ಸ್ಥಾಪಿಸುವ ನೇಕಾರರಿಗೆ ಯಂತ್ರೋಪಕರಣಗಳ ಮೇಲೆ ಬಂಡವಾಳ ಸಹಾಯಧನ, | ಶೇ. 20. ಗರಿಷ್ಠ 5.00 ಲಕ್ಷ. |

**ಇ. ಸಿದ್ಧ ಉಡುಪು ವಲಯ** –



**1. ಯಂತ್ರೋಪಕರಣಗಳು:** ಸಿದ್ಧ ಉಡುಪು ವಲಯದಲ್ಲಿ ರಾಜ್ಯದಲ್ಲಿ ಉತ್ತಮ ತಂತ್ರಜ್ಞಾನದ ಯಂತ್ರೋಪಕರಣಗಳಿದ್ದು ಇವುಗಳ ಬದಲಾವಣೆ ಅವಶ್ಯವಿರುವುದಿಲ್ಲ.



**2. ಇತರೆ ಮೂಲಭೂತ ಸೌಕರ್ಯಗಳು:** ಸಿದ್ಧ ಉಡುಪು ವಲಯಕ್ಕೆ ಅವಶ್ಯವಿರುವ ಸುಸಜ್ಜಿತ ಸಿದ್ಧ ಉಡುಪು ಪಾರ್ಕ್‌ಗಳನ್ನು ಅಭಿವೃದ್ಧಿಪಡಿಸುವುದು ಅವಶ್ಯವಿದೆ. ರಾಜ್ಯದಲ್ಲಿ ಇಂತಹ ಹತ್ತು ಪಾರ್ಕ್‌ಗಳನ್ನು ಮುಂದಿನ ಮೂರು ವರ್ಷಗಳಲ್ಲಿ ಹಾಗೂ 25 ಪಾರ್ಕ್‌ಗಳನ್ನು ಮುಂದಿನ ಹತ್ತು ವರ್ಷಗಳಲ್ಲಿ ಸ್ಥಾಪಿಸಲು ಉದ್ದೇಶಿಸಲಾಗಿದೆ. ಇವುಗಳ ಸ್ಥಾಪನೆಯಿಂದ ಸಿದ್ಧ ಉಡುಪು ಕೈಗಾರಿಕೆಯಲ್ಲಿ ಹೆಚ್ಚಿನ ಬಂಡವಾಳ ಹೂಡಿಕೆ ಸಾಧ್ಯವಾಗುವುದಲ್ಲದೇ ಈ ಕೈಗಾರಿಕೆಗಳು ಜಾಗತಿಕ ಮಟ್ಟದಲ್ಲಿ ಬೇಡಿಕೆಯಿರುವ ಉತ್ಪನ್ನಗಳನ್ನು ತಯಾರಿಸಲು ಪೂರಕ ಪರಿಸರವನ್ನು ನಿರ್ಮಿಸಿದಂತಾಗುತ್ತದೆ. ಇದರಿಂದ ರಾಜ್ಯದ ರಫ್ತು ಪರಿಮಾಣದಲ್ಲಿ ಮುಂಚೂಣಿಯಲ್ಲಿರುವ ಸಿದ್ಧ ಉಡುಪು ಕ್ಷೇತ್ರವನ್ನು ಬಲಪಡಿಸಿದಂತಾಗಿ ಈ ವಲಯದಲ್ಲಿ ಹೆಚ್ಚಿನ ಉದ್ಯೋಗಾವಕಾಶಗಳನ್ನು ಸೃಷ್ಟಿಸಬಹುದಾಗಿದೆ.

**<u>ಮುನ್ನೋಟ:</u>**






**"ರಾಜ್ಯದಲ್ಲಿ 2020 ರ ವೇಳೆಗೆ 25 ಸುಸಜ್ಜಿತ ಜವಳಿ ಪಾರ್ಕ್‌ಗಳನ್ನು ಸ್ಥಾಪಿಸಿ ಎಲ್ಲ ಅಗತ್ಯ ಮೂಲಭೂತ ಸೌಕರ್ಯಗಳನ್ನು ಒದಗಿಸಿ ಜವಳಿ ಕೈಗಾರಿಕೆಗಳನ್ನು ಆಕರ್ಷಿಸುವುದರ ಮೂಲಕ ರೂ. 25000 ಕೋಟಿಗಳಷ್ಟು ಬಂಡವಾಳ ಹೂಡಿಸುವುದು. ಆ ಮೂಲಕ ಸುಮಾರು 1000000 ಜನರಿಗೆ ಉದ್ಯೋಗ ಒದಗಿಸುವುದು."**

ಸಿದ್ಧ ಉಡುಪು ವಲಯಕ್ಕೆ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಇಲಾಖೆಯಲ್ಲಿ ಸುವರ್ಣ ವಸ್ತ್ರನೀತಿಯನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಈ ನೀತಿಯಡಿ ರಾಜ್ಯದಲ್ಲಿ ಹೊಸದಾಗಿ ಬಂಡವಾಳ ಹೂಡಬಯಸುವ ಜವಳಿ ಕೈಗಾರಿಕೋದ್ಯಮಿಗಳಿಗೆ ಪೂರಕವಾದ ಎಲ್ಲ ಪ್ರೋತ್ಸಾಹಗಳನ್ನು ಸೇರಿಸಲಾಗಿದೆ.

**ಯೋಜನೆಯಲ್ಲಿ ತರಬಹುದಾದ ಬದಲಾವಣೆ :** ಕಾಲಕಾಲಕ್ಕೆ ಅವಶ್ಯಕತೆಯನ್ನು ಗಮನದಲ್ಲಿರಿಸಿಕೊಂಡು ಕೈಗಾರಿಕೆಗಳಿಗೆ ಒದಗಿಸುವ ಪ್ರೋತ್ಸಾಹಗಳನ್ನು ಪರಿಷ್ಕರಿಸಬಹುದಾಗಿದೆ.

**<u>ಮೂರು ಲಕ್ಷ ಜನರಿಗೆ ಜವಳಿ ಕ್ಷೇತ್ರದಲ್ಲಿ ಉದ್ಯೋಗ ಸೃಷ್ಟಿ.</u>**

**<u>ಮುನ್ನೋಟ:</u>**



**"ರಾಜ್ಯದಲ್ಲಿ 2020 ರ ವೇಳೆಗೆ 250 ಸುಸಜ್ಜಿತ ಕೌಶಲ್ಯಾಭಿವೃದ್ಧಿ ಕೇಂದ್ರಗಳನ್ನು ಸ್ಥಾಪಿಸಿ ಎಲ್ಲ ಅಗತ್ಯ ಮೂಲಭೂತ ಸೌಕರ್ಯಗಳನ್ನು ಒದಗಿಸಿ ಜವಳಿ ಕೈಗಾರಿಕೆಗಳಿಗೆ ಅಗತ್ಯವಿರುವ ಮಾನವ ಸಂಪನ್ಮೂಲದ ಸಂಪೂರ್ಣ ಬೇಡಿಕೆಯನ್ನು ಪೂರೈಸುವುದು. ಆ ಮೂಲಕ ಸುಮಾರು 1000000 ಜನರಿಗೆ ಉದ್ಯೋಗ ಒದಗಿಸುವುದು."**



ಸುವರ್ಣ ವಸ್ತ್ರ ನೀತಿ 2008-13 ರಲ್ಲಿ ಘೋಷಿಸಿರುವ ಕಾರ್ಯಕ್ರಮಗಳಲ್ಲಿ ಸಿದ್ದ ಉಡುಪು ತಯಾರಿಕೆ, ಕಸೂತಿ, ಎಂಬ್ರಾಡರಿ, ಸ್ಯೂಯಿಂಗ್ ಮಿಷಿನ್ ಆಪರೇಟರ್ ಕೋರ್ಸ್,






ಗಾರ್ಮೆಂಟ್ ಕನ್ಸ್ಟ್ರಕ್ಷನ್ ಕೋರ್ಸ್, ಕೈಮಗ್ಗದಲ್ಲಿ ನೇಯ್ಗೆ ಮತ್ತು ವಿದ್ಯುತ್ ಮಗ್ಗ ನೇಯ್ಗೆ ಮುಂತಾದ ಜವಳಿ ಆಧಾರಿತ ಚಟುವಟಿಕೆಗಳಲ್ಲಿ ತರಬೇತಿ ನೀಡಿ ಗ್ರಾಮೀಣ ಮತ್ತು ನಗರ ಪ್ರದೇಶದ **ಸುಮಾರು ಮೂರು ಲಕ್ಷ ನಿರುದ್ಯೋಗಿ ಯುವಜನರಿಗೆ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಉದ್ಯೋಗ ಒದಗಿಸಲಾಗುವುದು**. ಈ ಉದ್ದೇಶಕ್ಕಾಗಿ ರಾಜ್ಯದ ಎಲ್ಲ ತಾಲ್ಲೂಕು ಕೇಂದ್ರಗಳಲ್ಲಿ ಹಂತಹಂತವಾಗಿ ಕೌಶಲ್ಯಾಭಿವೃದ್ಧಿ ಕೇಂದ್ರಗಳನ್ನು ಸ್ಥಾಪಿಸಲಾಗುವುದು.



**ಯೋಜನೆಯ ಫಲ :**

- ರಾಜ್ಯದಲ್ಲಿನ ಜವಳಿ ಕ್ಷೇತ್ರದ ಸರ್ವಾಂಗೀಣ ಅಭಿವೃದ್ಧಿಗೆ ಮಾನವ ಸಂಪನ್ಮೂಲ ಪೂರೈಕೆ.
- ಸಿದ್ಧಉಡುಪು ಕ್ಷೇತ್ರದ ಅಭಿವೃದ್ಧಿಗೆ ಪ್ರಾಶಸ್ತ್ಯ.
- 2020 ರ ವೇಳೆಗೆ 10,00,000 ಉದ್ಯೋಗ ಸೃಜನೆ.
- ರೂ 20,000 ಕೋಟಿ ಬಂಡವಾಳ ಆಕರ್ಷಣೆ.
- ಪ್ರಾದೇಶಿಕ ಅಸಮತೋಲನೆ ನಿವಾರಣೆ.
- ಹಿಂದುಳಿದ ಪ್ರದೇಶಗಳಲ್ಲಿಯೂ ಜವಳಿ ಆಧಾರಿತ ಕೈಗಾರಿಕೆಗಳ ಸ್ಥಾಪನೆ.
- ರಾಜ್ಯ ರಫ್ತು ಪ್ರಮಾಣದಲ್ಲಿ ಗಣನೀಯ ಹೆಚ್ಚಳ.
- ರಾಜ್ಯದ ಆರ್ಥಿಕ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರ.


# 2. ಉತ್ಪಾದನೆ.

## ರಾಜ್ಯದಲ್ಲಿ ಜವಳಿ ಕ್ಷೇತ್ರದಲ್ಲಿ ಇರುವ ಉತ್ಪಾದನೆಯ ಪಕ್ಷಿನೋಟ ಇಂತಿದೆ.

### ಅ. ಕೈಮಗ್ಗ ವಲಯ –



1. **ರೇಷ್ಮೆ :** ಕೈಮಗ್ಗ ವಲಯದಲ್ಲಿ ರೇಷ್ಮೆ ನೇಕಾರರು ಕುಣಿ ಮಗ್ಗಗಳಲ್ಲಿ ಪ್ರಮುಖವಾಗಿ ರೇಷ್ಮೆ ಸೀರೆಗಳನ್ನು ಉತ್ಪಾದಿಸುತ್ತಿದ್ದು ಸರಿಸುಮಾರು 20,000 ನೇಕಾರರು 40,000 ಮಗ್ಗಗಳಲ್ಲಿ ವಾರ್ಷಿಕ ರೂ.750.00 ಕೋಟಿ ಮೌಲ್ಯದ 40,00,000 ಸೀರೆಗಳನ್ನು ಉತ್ಪಾದಿಸುತ್ತಿದ್ದಾರೆ.



2. **ಹತ್ತಿ :** ಹತ್ತಿ ವಲಯದಲ್ಲಿ ಫ್ರೇಮ್ ಕೈಮಗ್ಗಗಳಲ್ಲಿ ಲುಂಗಿ, ಟವಲ್, ಬೆಡ್‌ಶೀಟ್, ಅಂಗವಸ್ತ್ರಗಳು, ಫರ್ನಿಷಿಂಗ್ ಬಟ್ಟೆ ಮುಂತಾದ ಉತ್ಪನ್ನಗಳನ್ನು ನೇಕಾರರು ಉತ್ಪಾದಿಸುತ್ತಿದ್ದಾರೆ. ಹತ್ತಿ ಬಟ್ಟೆ ನೇಯ್ಗೆಯ ಸುಮಾರು 10,000 ಮಗ್ಗಗಳಿದ್ದು ಅವುಗಳಲ್ಲಿ ವಾರ್ಷಿಕ ಸುಮಾರು ರೂ. 150.00 ಕೋಟಿ ಮೌಲ್ಯದ 300.00 ಲಕ್ಷ ಮೀಟರ್ ಬಟ್ಟೆ ಉತ್ಪಾದನೆಯಾಗುತ್ತಿದೆ.



3. **ಉಣ್ಣೆ :** ಉಣ್ಣೆ ವಲಯದಲ್ಲಿ ಕೆಲಸ ಮಾಡುತ್ತಿರುವ ಕೈಮಗ್ಗ ನೇಕಾರರು ಬಹಳ ಹಳೆಯ ಮಾದರಿಯ ಕುಣಿ ಮಗ್ಗಗಳಲ್ಲಿ ನೇಕಾರಿಕೆ ಮಾಡುತ್ತಿದ್ದು ಸುಮಾರು 10,000 ಮಗ್ಗಗಳಲ್ಲಿ ವಾರ್ಷಿಕ ರೂ.2.00 ಕೋಟಿ ಮೌಲ್ಯದ 6.00 ಲಕ್ಷ ಕಂಬಳಿಗಳನ್ನು ಉತ್ಪಾದಿಸುತ್ತಿದ್ದಾರೆ. ರಾಜ್ಯದಲ್ಲಿ ಉತ್ಪಾದನೆಯಾಗುತ್ತಿರುವ ಉಣ್ಣೆಯು ಸ್ವಭಾವತಃ ಒರಟಾಗಿದ್ದು ನವಿರಾದ ಉತ್ಪನ್ನಗಳ ತಯಾರಿಕೆಗೆ ಸೂಕ್ತವಾಗಿರುವುದಿಲ್ಲ.

### ಆ. ವಿದ್ಯುತ್‌ಮಗ್ಗ ವಲಯ –

ವಿದ್ಯುತ್‌ಮಗ್ಗ ವಲಯದಲ್ಲಿ ಬಹುತೇಕ ಪಾಲಿಯೆಸ್ಟರ್, ರೆಯಾನ್, ಆರ್ಟ್‌ಸಿಲ್ಕ್ ಹಾಗೂ ರೇಷ್ಮೆ ಉತ್ಪನ್ನಗಳು ತಯಾರಾಗುತ್ತಿದ್ದು ಸುಮಾರು ಒಂದು ಲಕ್ಷ ಮಗ್ಗಗಳಲ್ಲಿ ವಾರ್ಷಿಕ ರೂ.4000.00

ಕೋಟಿ ಮೌಲ್ಯದ 75 ಕೋಟಿ ಮೀಟರ್ ಬಟ್ಟೆ ಉತ್ಪಾದನೆಯಾಗುತ್ತದೆ. ಈ ವಲಯದಲ್ಲಿ ಉತ್ಪಾದನೆ ಪರಿಮಾಣವನ್ನು ಹೆಚ್ಚಿಸಲು ಹಳೆಯ ತಂತ್ರಜ್ಞಾನದ ಮಗ್ಗಗಳನ್ನು ಬದಲಾಯಿಸಿ ಹೊಸ ತಂತ್ರಜ್ಞಾನದ, ಹೆಚ್ಚು ಉತ್ಪಾದನಾ ಸಾಮರ್ಥ್ಯದ ಮಗ್ಗಗಳನ್ನು ಅಳವಡಿಸುವುದು ಹಾಗೂ ಅಗತ್ಯ ಬಂಡವಾಳ ಒದಗಿಸುವುದು ಅವಶ್ಯವಿದೆ.

**ಇ. ಸಿದ್ಧ ಉಡುಪು ವಲಯ** –

ಸಿದ್ಧ ಉಡುಪು ವಲಯದಲ್ಲಿ ರಾಜ್ಯದಲ್ಲಿ ಜಾಗತಿಕ ಮಾರುಕಟ್ಟೆಯ ಉತ್ತಮ ಗುಣಮಟ್ಟದ ಉತ್ಪನ್ನಗಳನ್ನು ತಯಾರಿಸಲಾಗುತ್ತಿದೆ. ಇದಕ್ಕೆ ಅವಶ್ಯವಿರುವ ಕಚ್ಚಾ ಮಾಲನ್ನು ಹೆಚ್ಚಿನಂಶ ನೆರೆಯ ರಾಜ್ಯಗಳಾದ ತಮಿಳುನಾಡು ಮತ್ತು ಮಹಾರಾಷ್ಟ್ರಗಳಿಂದ ಆಮದು ಮಾಡಿಕೊಳ್ಳಲಾಗುತ್ತಿದೆ. ನಮ್ಮ ರಾಜ್ಯದಲ್ಲಿ ಕೈಮಗ್ಗ ಮತ್ತು ವಿದ್ಯುತ್‌ಮಗ್ಗ ವಲಯಗಳು ಪ್ರಬಲವಾಗಿ ಇದ್ದರೂ ಸಹ ಉತ್ಪಾದನಾ ವೆಚ್ಚದಲ್ಲಿ ಹೆಚ್ಚಳವಿರುವುದರಿಂದ ಹಾಗೂ ಕಡಿಮೆ ತಂತ್ರಜ್ಞಾನದ ಮಗ್ಗಗಳಿರುವುದರಿಂದ ಇಲ್ಲಿಯ ಬಟ್ಟೆಯನ್ನು ಸಿದ್ಧ ಉಡುಪು ಘಟಕಗಳಲ್ಲಿ ಉಪಯೋಗಿಸುತ್ತಿಲ್ಲ. ಈ ಹಿನ್ನೆಲೆಯಲ್ಲಿ ನೇಕಾರಿಕೆ ಹಂತದಲ್ಲಿ ತಂತ್ರಜ್ಞಾನ ಉನ್ನತೀಕರಣಕ್ಕೆ ಪ್ರೋತ್ಸಾಹಿಸಿ, ಕಡಿಮೆ ಬಡ್ಡಿದರದ ಬಂಡವಾಳ ಒದಗಿಸುವ ಮೂಲಕ ಉತ್ಪಾದನಾ ವೆಚ್ಚವನ್ನು ಕಡಿಮೆ ಮಾಡಿ ರಾಜ್ಯದಲ್ಲಿ ಉತ್ಪಾದನೆಯಾಗುವ ಬಟ್ಟೆಯನ್ನು ರಾಜ್ಯದ ಸಿದ್ಧ ಉಡುಪು ಘಟಕಗಳು ಸಂಪೂರ್ಣವಾಗಿ ಉಪಯೋಗಿಸುವಂತೆ ಸಂಪರ್ಕ ಕಲ್ಪಿಸುವುದು ಅವಶ್ಯವಿದೆ.

ಪ್ರಸ್ತುತ ರಾಜ್ಯದಲ್ಲಿ 1,500 ಸಿದ್ಧ ಉಡುಪು ಘಟಕಗಳಿದ್ದು ಇವುಗಳಿಂದ ವಾರ್ಷಿಕ **ರೂ.** 4500 ಕೋಟಿ ಮೌಲ್ಯದ ಉತ್ಪನ್ನಗಳು ತಯಾರಾಗುತ್ತಿವೆ. ಇದರಲ್ಲಿ ಸುಮಾರು **ರೂ.** 3500 ಕೋಟಿ ಮೌಲ್ಯದ ಉತ್ಪನ್ನಗಳು ಹೊರ ದೇಶಗಳಿಗೆ ರಫ್ತಾಗುತ್ತಿದ್ದು ದೇಶದ ವಿದೇಶಿ ವಿನಿಮಯ ಗಳಿಕೆಯಲ್ಲಿ ಪ್ರಮುಖ ಪಾತ್ರ ವಹಿಸಿದೆ. ಈ ವಲಯದಲ್ಲಿ ಬಂಡವಾಳ ಅಥವಾ ತಂತ್ರಜ್ಞಾನದ ಕೊರತೆ ಕಂಡುಬರುವುದಿಲ್ಲ. ಉತ್ತಮ ಮೂಲಭೂತ ಸೌಕರ್ಯಗಳನ್ನು ಒದಗಿಸುವ ಮೂಲಕ ರಾಜ್ಯದ ಎಲ್ಲ ಪ್ರದೇಶಗಳಲ್ಲಿ ಬಂಡವಾಳ ಹೂಡಿಕೆದಾರರನ್ನು ಆಕರ್ಷಿಸಿ ಹೊಸ ಕೈಗಾರಿಕೆಗಳನ್ನು ಸ್ಥಾಪಿಸಲು ಪ್ರೋತ್ಸಾಹಿಸಬಹುದಾಗಿದೆ. ಇದಕ್ಕಾಗಿ ಸುಸಜ್ಜಿತ ಜವಳಿ ಪಾರ್ಕ್‌ಗಳನ್ನು ಸ್ಥಾಪಿಸಬೇಕಾಗುತ್ತದೆ. ನೂತನ ಸುವರ್ಣ ವಸ್ತ್ರನೀತಿಯಲ್ಲಿ ಇದಕ್ಕೆ ವಿಫುಲ ಅವಕಾಶಗಳನ್ನು ಕಲ್ಪಿಸಲಾಗಿದೆ.

**ಮುನ್ನೋಟ: . . .**
**2020 ರ ವೇಳೆಗೆ. . . .**

- ರೇಷ್ಮೆ ಕೈಮಗ್ಗ ನೇಕಾರರಿಗೆ ಉತ್ತಮ ಪರಿಕರ ಹಾಗೂ ಬಂಡವಾಳ ಒದಗಿಸುವ ಮೂಲಕ ಉತ್ಪಾದನೆಯನ್ನು ವಾರ್ಷಿಕ ರೂ.1000.00 ಕೋಟಿಗಳಿಗೆ ಹೆಚ್ಚಿಸುವುದು.

- ಹತ್ತಿ ಕೈಮಗ್ಗ ನೇಕಾರರಿಗೆ ಅವಶ್ಯವಿರುವ ಆಧುನಿಕ ಕೈಮಗ್ಗಗಳನ್ನು ಹಾಗೂ ಉತ್ಪಾದನೆಯ ವೇಗವನ್ನು ಹೆಚ್ಚಿಸಲು ಅವಶ್ಯವಿರುವ ಕೆಲವು ತಂತ್ರಜ್ಞಾನವನ್ನು ಅಳವಡಿಸುವುದರ ಮೂಲಕ ಹಾಗು ಅಗತ್ಯ ಬಂಡವಾಳವನ್ನು ಒದಗಿಸುವ ಮೂಲಕ ಉತ್ಪಾದನೆಯನ್ನು ವಾರ್ಷಿಕ ಸುಮಾರು 200.00 ಕೋಟಿಗಳಿಗೆ ಹೆಚ್ಚಿಸುವುದು.
- ರಾಜ್ಯದ ಒರಟು ಉಣ್ಣೆಯನ್ನು ಸಂಸ್ಕರಿಸಿ ಉತ್ತಮ ಮೌಲ್ಯದ ನವಿರು ಉತ್ಪನ್ನಗಳನ್ನು ತಯಾರಿಸಲು ಅನುಕೂಲವಾಗುವಂತೆ ಉಣ್ಣೆ ಸಂಶೋಧನ ಕೇಂದ್ರವನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ. ಇದರ ಜೊತೆಗೆ ಹಾಲಿ ಇರುವ ಕೈಮಗ್ಗಗಳನ್ನು ಸಂಪೂರ್ಣ ಬದಲಾಯಿಸಿ ಹೊಸ ಮಾದರಿಯ ಕೈಮಗ್ಗಗಳನ್ನು ಒದಗಿಸುವ ಮೂಲಕ ಈ ಕ್ಷೇತ್ರದಲ್ಲಿ ವಾರ್ಷಿಕ ಉತ್ಪಾದನೆಯನ್ನು ರೂ.10.00 ಕೋಟಿಗಳಿಗೆ ಹೆಚ್ಚಿಸುವುದು.
- ರಾಜ್ಯದ ಎಲ್ಲ ನೇಕಾರರಿಗೆ ಸುಲಭ ಬಡ್ಡಿ ದರದಲ್ಲಿ ತಲಾ ಕನಿಷ್ಟ ರೂ.50000 ಗಳ ಸಾಲ ಸೌಲಭ್ಯ ಒದಗಿಸುವುದು.
- ರಾಜ್ಯ ಸರ್ಕಾರದಿಂದ ವಿದ್ಯುತ್ ಮಗ್ಗಗಳ ಆಧುನೀಕರಣಕ್ಕೆ ಸಹಾಯಧನ ಒದಗಿಸುವುದು ಹಾಗು ನೂತನ ತಂತ್ರಜ್ಞಾನದ ಘಟಕಗಳಿಗೆ ಕೇಂದ್ರ ಸರ್ಕಾರದ ತಂತ್ರಜ್ಞಾನ ಉನ್ನತೀಕರಣ ಯೋಜನೆಯ ಲಾಭ ಪಡೆಯುವ ಮೂಲಕ ಉತ್ಪಾದನೆಯ ಪರಿಮಾಣವನ್ನು ವಾರ್ಷಿಕ ರೂ. 6000.00 ಕೋಟಿಗಳಿಗೆ ಹೆಚ್ಚಿಸುವುದು.
- ರಾಜ್ಯದಲ್ಲಿ ಒಟ್ಟು 25 ಸುಸಜ್ಜಿತ ಜವಳಿ ಪಾರ್ಕ್‌ಗಳನ್ನು ಸ್ಥಾಪಿಸುವುದು. ಇದಕ್ಕೆ ಕೇಂದ್ರ ಸರ್ಕಾರದಿಂದ ಎಸ್‌ಐಟಿಪಿ ಯೋಜನೆಯಡಿ ದೊರೆಯುವ ನೆರವಿನ ಸಂಪೂರ್ಣ ಲಾಭ ಪಡೆಯುವುದು.

## ಉತ್ಪಾದನೆ ಬಲಪಡಿಸಲು ಇಲಾಖೆಯಲ್ಲಿರುವ ಯೋಜನೆ :


### 1. ಕೇಂದ್ರ ಪುರಸ್ಕೃತ ಮಿಲ್‌ಗೇಟ್ ಪ್ರೈಸ್ ಯೋಜನೆ :



ಈ ಯೋಜನೆಯಡಿ ನೇಕಾರರು ಉತ್ಪಾದನೆಗಾಗಿ ಕಾರ್ಖಾನೆಗಳಿಂದ ಖರೀದಿಸುವ ನೂಲಿನ ಸಾಗಾಣಿಕೆ ವೆಚ್ಚವನ್ನು ಭರಿಸಿಕೊಡುವ ಮೂಲಕ ಕಾರ್ಖಾನೆಯ ಬಾಗಿಲ ದರದಲ್ಲಿ ಒದಗಿಸಲಾಗುತ್ತಿದೆ. ಜೊತೆಗೆ ಶೇ.2.5 ರಷ್ಟು ಸಹಾಯಧನವನ್ನೂ ನೀಡಲಾಗುತ್ತಿದೆ. ಈ ಯೋಜನೆಯು ಅಸಂಘಟಿತ ವಲಯದ ನೇಕಾರರಿಗೆ ಹೆಚ್ಚು ಪ್ರಯೋಜನವಾಗುತ್ತಿಲ್ಲ. ಅಲ್ಲದೆ ಈ ಯೋಜನೆಯಡಿ ದೊರಕುತ್ತಿರುವ ಆರ್ಥಿಕ ಸಹಾಯವು ನೇಕಾರರು ಮಾರುಕಟ್ಟೆ ಪೈಪೋಟಿಗೆ ಸ್ಪಂದಿಸುವಷ್ಟು ವಿಫುಲವಾಗಿಲ್ಲ.

**ಯೋಜನೆಯಲ್ಲಿ ತರಬಹುದಾದ ಬದಲಾವಣೆ :** ಇದು ಕೇಂದ್ರ ಸರ್ಕಾರದ ಯೋಜನೆಯಾದ್ದರಿಂದ ಇದರಲ್ಲಿ ನೀಡುತ್ತಿರುವ ಸಹಾಯಧನದ ಜೊತೆಗೆ ರಾಜ್ಯ ಸರ್ಕಾರದ ವತಿಯಿಂದ ಹೊಸ ಯೋಜನೆಯೊಂದನ್ನು ಜಾರಿಗೆ ತಂದು ನೇಕಾರರು ಖರೀದಿಸುವ ಕಚ್ಚಾ ಮಾಲಿಗೆ ಶೇ. 15 ಸಹಾಯಧನ ಒದಗಿಸಬಹುದು. ಇದರಿಂದ ನೇಕಾರರ ಉತ್ಪನ್ನಗಳ ಉತ್ಪಾದನಾ ವೆಚ್ಚವು ಗಣನೀಯ ಪ್ರಮಾಣದಲ್ಲಿ ಕಡಿಮೆಯಾಗಿ ಮಾರುಕಟ್ಟೆಯಲ್ಲಿ ಉತ್ತಮ ಲಾಭಾಂಶ ಗಳಿಸಲು ಅನುಕೂಲವಾಗುತ್ತದೆ. ಜೊತೆಗೆ ಜವಳಿ ಕೈಗಾರಿಕೆಗೆ ಹೆಚ್ಚು ಪ್ರೋತ್ಸಾಹ ದೊರೆತಂತಾಗಿ ಹೆಚ್ಚು ಹೆಚ್ಚು ಜನರು ಈ ಉದ್ದಿಮೆಗೆ ಆಕರ್ಷಿತರಾಗುತ್ತಾರೆ. ಇದರಿಂದ ನಿರುದ್ಯೋಗ ಸಮಸ್ಯೆ ಸ್ವಲ್ಪ ಮಟ್ಟಿಗೆ ನಿಯಂತ್ರಣಕ್ಕೆ ಬರುವುದೆಂದು ನಿರೀಕ್ಷಿಸಲಾಗಿದೆ.

### 2. ವಿದ್ಯುತ್ ಮಗ್ಗ / ಮಗ್ಗಪೂರ್ವ ಘಟಕಗಳಿಗೆ ವಿದ್ಯುತ್ ಸಹಾಯಧನ ಯೋಜನೆ.



**ಉದ್ದೇಶ:** ರಾಜ್ಯದಲ್ಲಿನ ವಿದ್ಯುತ್‌ಮಗ್ಗ ಘಟಕಗಳು ನಿರಂತರವಾಗಿ ಉತ್ಪಾದನೆಯಲ್ಲಿ ತೊಡಗಲು ಅನುಕೂಲವಾಗುವಂತೆ ಪ್ರತಿ ಯೂನಿಟ್‌ಗೆ ರೂ 1.25 ದರದಲ್ಲಿ ವಿದ್ಯುತ್ ಒದಗಿಸಲು ಸಹಾಯಧನ ನೀಡಲಾಗುತ್ತಿದೆ. ಈ ಯೋಜನೆಯಲ್ಲಿ ಈವರೆಗೆ ಲಾಭ ಪಡೆದಿರುವ ಘಟಕಗಳ ವಿವರ ಇಂತಿದೆ.

| ಈವರೆಗೆ ಈ ವಿದ್ಯುತ್ ಸಹಾಧನ ಪಡೆದಿರುವ ಜವಳಿ ಘಟಕಗಳು | | | |
|---|---|---|---|
| **ಹೆಚ್.ಪಿ.** | **ಘಟಕಗಳು** | **ಮಗ್ಗಗಳು/ ಯಂತ್ರಗಳು** | **ಪಡೆದ ಸಹಾಯಧನ** |
| **1 – 10** | 26157 | 84672 | 2145.92 ಲಕ್ಷ |
| **1 – 20** | 690 | 4284 | |

**ಪರಿಣಾಮಗಳು**

- ನೇಕಾರರ ಆರ್ಥಿಕ ಸ್ಥಿತಿಯಲ್ಲಿ ಸುಧಾರಣೆ.
- ಗಣನೀಯ ಪ್ರಮಾಣದಲ್ಲಿ ಉತ್ಪಾದನಾ ವೆಚ್ಚದ ಇಳಿತ.
- ಲಾಭಾಂಶದಲ್ಲಿ ಹೆಚ್ಚಳ.
- ನೇಕಾರರಿಗೆ ಉದ್ಯೋಗ ಮುಂದುವರೆಸಲು ಪ್ರೋತ್ಸಾಹ.
-

**ಯೋಜನೆಯಲ್ಲಿ ತರಬಹುದಾದ ಬದಲಾವಣೆ :** ಯೋಜನೆಯು ಹೆಚ್ಚು ಪರಿಣಾಮಕಾರಿಯಾಗಿ ಅನುಷ್ಠಾನಗೊಳ್ಳುತ್ತಿದ್ದು ಯಾವುದೇ ಬದಲಾವಣೆ ಅವಶ್ಯವಿಲ್ಲ. **ವಿದ್ಯುತ್ ಕೊರತೆ ಸಂದರ್ಭಗಳಲ್ಲಿ ಪರಿಸ್ಥಿತಿಯನ್ನು ನಿಭಾಯಿಸಲು ಜವಳಿ ಕ್ಷೇತ್ರಕ್ಕೆ ವಿಂಡ್ ಮಿಲ್, ಸೋಲಾರ್ ಮುಂತಾದ ಮೂಲಗಳ ಮೂಲಕ ಪ್ರತ್ಯೇಕ ವಿದ್ಯುತ್ ಉತ್ಪಾದನಾ ಯೋಜನೆಗಳ ಬಗ್ಗೆ ಚಿಂತನೆ ಅವಶ್ಯ.**

## ಬಂಡವಾಳ ಒದಗಿಸಲು ಇಲಾಖೆಯಲ್ಲಿರುವ ಯೋಜನೆ :

**1. ನೇಕಾರರಿಗೆ ಶೇಕಡ 3 ರ ಬಡ್ಡಿದರದಲ್ಲಿ ಸಾಲ ಸೌಲಭ್ಯ.**

ಕೈಮಗ್ಗ ಹಾಗೂ ವಿದ್ಯುತ್‌ಮಗ್ಗ ವಲಯಗಳಲ್ಲಿ ಉತ್ಪಾದನೆಯನ್ನು ಹೆಚ್ಚಿಸಲು ನೇಕಾರರಿಗೆ ಹೆಚ್ಚಿನ ಬಂಡವಾಳ ಒದಗಿಸಬೇಕಾಗುತ್ತದೆ. ಇದಕ್ಕಾಗಿ ರಾಜ್ಯ ಸರ್ಕಾರವು ಜಾರಿಗೆ ತಂದಿರುವ ಶೇ.3 ರ ಸುಲಭ ಬಡ್ಡಿದರದ ಸಾಲ ಯೋಜನೆಯನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಉದ್ದೇಶಿಸಲಾಗಿದೆ. ಈ ಯೋಜನೆಯಡಿ ಬ್ಯಾಂಕ್‌ಗಳು ವಿಧಿಸುವ ಶೇ. 3 ಕ್ಕಿಂತ ಹೆಚ್ಚಿನ ಬಡ್ಡಿಯನ್ನು (ಗರಿಷ್ಠ 9.5%) ಸರ್ಕಾರದಿಂದ ಭರಿಸಿ ನೇಕಾರರಿಗೆ ಸಾಲ ಒದಗಿಸಲು ಅವಕಾಶವಿದೆ. ಕೆಲವು ಬ್ಯಾಂಕ್‌ಗಳು ಶೇ. 12.5 ಕ್ಕಿಂತ ಹೆಚ್ಚಿನ ಬಡ್ಡಿ ದರ ವಿಧಿಸುತ್ತಿರುವುದರಿಂದ ನೇಕಾರರಿಗೆ ಆಗುವ ಹೆಚ್ಚಿನ ಹೊರೆಯನ್ನು ಭರಿಸಲು ಸಾಧ್ಯವಾಗದೆ ಈ ಯೋಜನೆಯು ಪರಿಣಾಮಕಾರಿಯಾಗಿ ಅನುಷ್ಠಾನವಾಗುತ್ತಿಲ್ಲ.

**ಯೋಜನೆಯಲ್ಲಿ ತರಬಹುದಾದ ಬದಲಾವಣೆ :** ಈ ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರದಿಂದ ಒದಗಿಸುವ **ಬಡ್ಡಿ ಸಹಾಯಧನದ ಗರಿಷ್ಠ ಮಿತಿಯನ್ನು ತೆಗೆದು ಹಾಕಿ ಯೋಜನೆಯನ್ನು ಪರಿಷ್ಕರಿಸಿ ಅನುಷ್ಠಾನಗೊಳಿಸಲು ಉದ್ದೇಶಿಸಲಾಗಿದೆ.**

# 3. ಸಂಸ್ಕರಣೆ.


**ರಾಜ್ಯದಲ್ಲಿ ಜವಳಿ ಕ್ಷೇತ್ರದಲ್ಲಿ ಉತ್ಪನ್ನಗಳ ಸಂಸ್ಕರಣೆಗೆ ಇರುವ ಸೌಕರ್ಯಗಳ ಚಿತ್ರಣ ಇಂತಿದೆ.**

1. **ರೇಷ್ಮೆ :** ರೇಷ್ಮೆ ವಲಯದಲ್ಲಿ ಸಂಸ್ಕರಣೆಯು ಹೆಚ್ಚಾಗಿ ನೂಲಿನ ಹಂತದಲ್ಲಿ ಅವಶ್ಯಕವಿದೆ. ರೇಷ್ಮೆ ನೂಲನ್ನು ಡೀ–ಗಮ್ಮಿಂಗ್ ಮಾಡಿ, ಬ್ಲೀಚಿಂಗ್ ಮಾಡಿ, ಅವಶ್ಯಕತೆಗನುಗುಣವಾಗಿ ಬಣ್ಣ ಮಾಡಿ ನಂತರ ನೇಯ್ಗೆ ಮಾಡಲು ಮಗ್ಗಗಳ ಮೇಲೆ ಅಳವಡಿಸಲಾಗುತ್ತದೆ. ರಾಜ್ಯದಲ್ಲಿ ಈ ರೀತಿ ರೇಷ್ಮೆ ನೂಲನ್ನು ಸಂಸ್ಕರಿಸುವ ಸಣ್ಣ ಪ್ರಮಾಣದ ಸುಮಾರು 200 ಘಟಕಗಳಿವೆ. ಈ ಘಟಕಗಳಲ್ಲಿ ಸಾಂಪ್ರದಾಯಿಕ ಪದ್ಧತಿಯಲ್ಲಿ ನೂಲನ್ನು ಸಂಸ್ಕರಿಸಲಾಗುತ್ತಿದೆ. ಇದರಿಂದ ಅವುಗಳ ಉತ್ಪಾದಕತೆ ಮತ್ತು ಗುಣಮಟ್ಟ ಕಡಿಮೆಯಿದೆ.
2. **ಹತ್ತಿ :** ಹತ್ತಿ ವಲಯದಲ್ಲಿ ಸಂಸ್ಕರಣೆಗೆ ಮಹತ್ತರ ಪಾತ್ರವಿದೆ. ಏಕೆಂದರೆ ನೂಲನ್ನು ಹಾಗು ನೇಯ್ದ ಬಟ್ಟೆಯನ್ನು ಇಲ್ಲಿ ಸಂಸ್ಕರಿಸಲಾಗುತ್ತದೆ. ನೂಲನ್ನು ಸ್ಕವರಿಂಗ್, ಬ್ಲೀಚಿಂಗ್, ಸೈಝಿಂಗ್, ಡೈಯಿಂಗ್ ಮಾಡಿ ನೇಯ್ಗೆಗಾಗಿ ಮಗ್ಗಗಳಿಗೆ ಒದಗಿಸಲಾಗುತ್ತದೆ. ಬಟ್ಟೆಯ ಹಂತದಲ್ಲಿಯೂ ಸಹ ಬ್ಲೀಚಿಂಗ್, ಡೈಯಿಂಗ್ ಮಾಡಿ ಪ್ರಿಂಟ್ ಮಾಡಲಾಗುತ್ತದೆ.
3. **ಉಣ್ಣೆ** : ಉಣ್ಣೆ ವಲಯದಲ್ಲಿ ಕೆಲಸ ಮಾಡುತ್ತಿರುವ ಕೈಮಗ್ಗ ನೇಕಾರರು ಬಹಳ ಹಳೆಯ ಮಾದರಿಯ ಕುಣಿ ಮಗ್ಗಗಳಲ್ಲಿ ನೇಕಾರಿಕೆ ಮಾಡುತ್ತಿದ್ದು ಸುಮಾರು 10,000 ಮಗ್ಗಗಳಲ್ಲಿ ವಾರ್ಷಿಕ ರೂ.2.00 ಕೋಟಿ ಮೌಲ್ಯದ 6.00 ಲಕ್ಷ ಕಂಬಳಿಗಳನ್ನು ಉತ್ಪಾದಿಸುತ್ತಿದ್ದಾರೆ. ರಾಜ್ಯದಲ್ಲಿ ಉತ್ಪಾದನೆಯಾಗುತ್ತಿರುವ ಉಣ್ಣೆಯು ಸ್ವಭಾವತಃ ಒರಟಾಗಿದ್ದು ನವಿರಾದ ಉತ್ಪನ್ನಗಳ ತಯಾರಿಕೆಗೆ ಸೂಕ್ತವಾಗಿರುವುದಿಲ್ಲ.
4. **ಕೃತಕ ನೂಲಿನ ಉತ್ಪನ್ನಗಳು** : ಕೃತಕ ನೂಲಿನ ಜವಳಿ ಉತ್ಪನ್ನಗಳ ಸಂಸ್ಕರಣೆ ಎಂದರೆ ಸಾಮಾನ್ಯವಾಗಿ ಪ್ರಿಂಟಿಂಗ್ ಘಟಕಗಳು ಮಾತ್ರ. ಪಾಲಿಯೆಸ್ಟರ್, ನೈಲಾನ್, ಶಿಫಾನ್ ಮುಂತಾದ ಮಾದರಿಯ ಸೀರೆಗಳನ್ನು ಈ ಘಟಕಗಳಲ್ಲಿ ಪ್ರಿಂಟ್ ಮಾಡಲಾಗುತ್ತದೆ. ಇಂತಹ ಕೆಲವೇ ಘಟಕಗಳು ರಾಜ್ಯದಲ್ಲಿದ್ದು ಇವುಗಳ ಅವಶ್ಯಕತೆ ಆಧರಿಸಿ ಇವುಗಳ ಆಧುನೀಕರಣಕ್ಕೆ ಒತ್ತು ನೀಡಿ ಆಧುನಿಕ ಸಂಸ್ಕರಣೆ ಸೌಕರ್ಯಗಳನ್ನು ಬಲಪಡಿಸಲು ಉದ್ದೇಶಿಸಲಾಗಿದೆ. ಹೆಚ್ಚಾಗಿ ಇಂತಹ ಘಟಕಗಳ ಉಪಯೋಗವು ವಿದ್ಯುತ್ ಮಗ್ಗ ವಲಯಕ್ಕೆ ಆಗುವುದಿದ್ದು ಇವುಗಳನ್ನು ಬಲಪಡಿಸುವುದರಿಂದ ವಿದ್ಯುತ್ ಮಗ್ಗ ವಲಯಕ್ಕೆ ಪರೋಕ್ಷವಾಗಿ ಪ್ರೋತ್ಸಾಹ ನೀಡಿದಂತಾಗುತ್ತದೆ.

**<u>ಮುನ್ನೋಟ: . . .</u>**
**<u>2020 ರ ವೇಳೆಗೆ. . . .</u>**



- ರೇಷ್ಮೆ ಸಂಸ್ಕರಣಾ ಘಟಕಗಳಿಗೆ ಆಧುನಿಕ ತಂತ್ರಜ್ಞಾನದ ಯಂತ್ರೋಪಕರಣಗಳನ್ನು ಒದಗಿಸುವ ಮೂಲಕ ಅವುಗಳನ್ನು ಆಧುನೀಕರಿಸಿ ಈ ಉತ್ಪಾದನೆಯನ್ನು ಹಾಗು ಗುಣಮಟ್ಟವನ್ನು ಗಣನೀಯ ಪ್ರಮಾಣದಲ್ಲಿ ಹೆಚ್ಚಿಸಲು ಹೆಚ್ಚಿಸಲು ಉದ್ದೇಶಿಸಲಾಗಿದೆ.
- ಹತ್ತಿ ವಲಯದಲ್ಲಿ ಸಂಸ್ಕರಣಾ ಘಟಕಗಳನ್ನು ಆಧುನೀಕರಿಸಲು ಪ್ರೋತ್ಸಾಹಿಸುವ ಮೂಲಕ ಈ ಉತ್ಪಾದನೆಯನ್ನು ವಾರ್ಷಿಕ ಸುಮಾರು 200.00 ಕೋಟಿಗಳಿಗೆ ಹೆಚ್ಚಿಸಲು ಉದ್ದೇಶಿಸಲಾಗಿದೆ.



- ರಾಜ್ಯದ ಒರಟು ಉಣ್ಣೆಯನ್ನು ಸಂಸ್ಕರಿಸಿ ಉತ್ತಮ ಮೌಲ್ಯದ ನವಿರು ಉತ್ಪನ್ನಗಳನ್ನು ತಯಾರಿಸಲು ಅನುಕೂಲವಾಗುವಂತೆ ಉಣ್ಣೆ ಸಂಶೋಧನ ಕೇಂದ್ರವನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ

**<u>ಸಂಸ್ಕರಣೆ ವಲಯ ಬಲಪಡಿಸಲು ಇಲಾಖೆಯಲ್ಲಿರುವ ಕಾರ್ಯಕ್ರಮಗಳು :</u>**

ಸಂಸ್ಕರಣಾ ಘಟಕಗಳ ಆಧುನೀಕರಣಕ್ಕೆಂದು ಇಲಾಖೆಯಲ್ಲಿ ಯಾವುದೇ ಪ್ರತ್ಯೇಕ ಯೋಜನೆಯಿಲ್ಲ. ಆದರೆ ಜಿಲ್ಲಾ ವಲಯದಲ್ಲಿ "ಬಣ್ಣದ ಮನೆ" ಎಂಬ ಯೋಜನೆಯಿದ್ದು ಈ ಯೋಜನೆಯು ಕೈಮಗ್ಗ ನೇಕಾರರ ಸಹಕಾರ ಸಂಘಗಳಿಗೆ ಮಾತ್ರ ಅನ್ವಯವಾಗುತ್ತಿದೆ. ಸಣ್ಣ ಪ್ರಮಾಣದಲ್ಲಿ ನೂಲಿಗೆ ಬಣ್ಣ ಮಾಡುವ ಘಟಕಗಳನ್ನು ಸಂಘಗಳಲ್ಲಿ ಸ್ಥಾಪಿಸಿಕೊಳ್ಳಲು ಆರ್ಥಿಕ ಸಹಾಯ ಒದಗಿಸಲು ಅವಕಾಶವಿದೆ. ಈ ಯೋಜನೆಯು ಅಸಂಘಟಿತ ವಲಯದ ಘಟಕಗಳಿಗೆ ಪ್ರಯೋಜನವಾಗುತ್ತಿಲ್ಲ.

ನೂತನ ಸುವರ್ಣ ವಸ್ತ್ರನೀತಿ ಯೋಜನೆಯಲ್ಲಿ ವಸ್ತ್ರೋದ್ಯಮದ ಮೌಲ್ಯ ಸರಪಳಿಯಲ್ಲಿ ಬರುವ ಎಲ್ಲ ಚಟುವಟಿಕೆಗಳಿಗೆ ಪ್ರೋತ್ಸಾಹ ಮತ್ತು ರಿಯಾಯ್ತಿಗಳನ್ನು ಒದಗಿಸಲು

ಅವಕಾಶವಿರುವುದರಿಂದ ಇದರ ಲಾಭ ಪಡೆದು ಸಂಸ್ಕರಣಾ ಘಟಕಗಳ ಬಲವರ್ಧನೆ ಮಾಡಬಹುದಾಗಿದೆ.

**ಯೋಜನೆಯಲ್ಲಿ ತರಬಹುದಾದ ಬದಲಾವಣೆ :** ಸುವರ್ಣ ವಸ್ತ್ರನೀತಿಯ ಅವಕಾಶಗಳ ಜೊತೆಗೆ ಜಿಲ್ಲಾ ವಲಯ "ಬಣ್ಣದ ಮನೆ" ಯೋಜನೆಯನ್ನು ಅಸಂಘಟಿತ ವಲಯಕ್ಕೂ ವಿಸ್ತರಿಸಿ ಯೋಜನೆಗೆ ಬದಲಾವಣೆ ತಂದು ದೊಡ್ಡ ಪ್ರಮಾಣದಲ್ಲಿ ಸಂಸ್ಕರಣಾ ಘಟಕಗಳನ್ನು ಸ್ಥಾಪಿಸುವ ಕೈಗಾರಿಕೋದ್ಯಮಿಗಳಿಗೆ ಪ್ರೋತ್ಸಾಹ ಮತ್ತು ರಿಯಾಯಿತಿಗಳನ್ನು ನೀಡಲು ಉದ್ದೇಶಿಸಲಾಗಿದೆ.



# 4. ಮಾರುಕಟ್ಟೆ.

**ರಾಜ್ಯದಲ್ಲಿ ಜವಳಿ ಕ್ಷೇತ್ರದಲ್ಲಿ ಉತ್ಪನ್ನಗಳ ಮಾರಾಟಕ್ಕೆ ಇರುವ ಸೌಕರ್ಯಗಳ ಚಿತ್ರಣ ಇಂತಿದೆ.**

1. **ರೇಷ್ಮೆ :** ರೇಷ್ಮೆ ವಲಯದಲ್ಲಿ ಹೆಚ್ಚಾಗಿ ಕೈಮಗ್ಗಗಳಲ್ಲಿ ಅಪ್ಪಟ ರೇಷ್ಮೆ ಸೀರೆಗಳನ್ನು ಉತ್ಪಾದಿಸಲಾಗುತ್ತಿದೆ. ಈ ರೇಷ್ಮೆ ಸೀರೆಗಳಿಗೆ ಮಾರುಕಟ್ಟೆಯಲ್ಲಿ ನಿರಂತರ ಬೇಡಿಕೆಯಿದ್ದು ಮಾರಾಟದ ಸಮಸ್ಯೆ ಕಾಣಿಸುತ್ತಿಲ್ಲ. ಉಳಿದಂತೆ ಸ್ವಲ್ಪಮಟ್ಟಿಗೆ ವಿದ್ಯುತ್ ಮಗ್ಗಗಳಲ್ಲಿ ಎಕ್ಸ್‌ಪೋರ್ಟ್ ಮಾದರಿಯ ಡ್ಯೂಪಿಯಾನ್ ಮತ್ತು ಫರ್ನಿಷಿಂಗ್ ಬಟ್ಟೆಯನ್ನು ತಯಾರಿಸಲಾಗುತ್ತಿದೆ. ಈ ಉತ್ಪನ್ನಗಳಿಗೂ ಮಾರುಕಟ್ಟೆ ತೊಂದರೆ ಕಾಣಿಸುತ್ತಿಲ್ಲ. ರಾಜ್ಯದಲ್ಲಿ ಖಾಸಗಿ ವಲಯದಲ್ಲಿರುವ ಮಾರಾಟ ಮಳಿಗೆಗಳು ಈ ಉತ್ಪನ್ನಗಳಿಗೆ ಸಮರ್ಥವಾಗಿ ಮಾರುಕಟ್ಟೆ ಒದಗಿಸುತ್ತಿವೆ. ಒಟ್ಟಾರೆಯಾಗಿ ಅಪ್ಪಟ ರೇಷ್ಮೆ ಉತ್ಪನ್ನಗಳಿಗೆ ಮಾರುಕಟ್ಟೆ ಸಮಸ್ಯೆ ಇರುವುದಿಲ್ಲ.
2. **ಹತ್ತಿ :** ಹತ್ತಿ ವಲಯದಲ್ಲಿ ಕೈಮಗ್ಗದಲ್ಲಿ ತಯಾರಾಗುವ ಉತ್ಪನ್ನಗಳಿಗೆ ಸ್ವಲ್ಪ ಮಟ್ಟಿಗೆ ಮಾರುಕಟ್ಟೆ ಸಮಸ್ಯೆ ಇದೆ. ಇದಕ್ಕೆ ಪ್ರಮುಖ ಕಾರಣ ಕಚ್ಚಾಮಾಲಿನ ಬೆಲೆ. ನೆರೆ ರಾಜ್ಯಗಳಲ್ಲಿ ದೊರೆಯುವ ಕಚ್ಚಾ ಮಾಲಿಗೆ ಹೋಲಿಸಿದಲ್ಲಿ ರಾಜ್ಯದಲ್ಲಿ ದೊರೆಯುವ ನೂಲಿನ ಬೆಲೆ ಹೆಚ್ಚಿದೆ. ಇದರಿಂದ ಉತ್ಪಾದನಾ ವೆಚ್ಚದಲ್ಲಿ ಹೆಚ್ಚಳವಾಗುತ್ತಿದ್ದು ಮಾರುಕಟ್ಟೆ ಮೇಲೆ ವ್ಯತಿರಿಕ್ತ ಪ್ರಭಾವ ಬೀರಿದೆ.
3. **ಉಣ್ಣೆ** : ಉಣ್ಣೆ ವಲಯದಲ್ಲಿ ಕೆಲಸ ಮಾಡುತ್ತಿರುವ ಕೈಮಗ್ಗ ನೇಕಾರರು ಬಹಳ ಹಳೆಯ ಮಾದರಿಯ ಕುಣಿ ಮಗ್ಗಗಳಲ್ಲಿ ನೇಕಾರಿಕೆ ಮಾಡುತ್ತಿದ್ದು ಸುಮಾರು 10,000 ಮಗ್ಗಗಳಲ್ಲಿ ವಾರ್ಷಿಕ ರೂ.2.00 ಕೋಟಿ ಮೌಲ್ಯದ 6.00 ಲಕ್ಷ ಕಂಬಳಿಗಳನ್ನು ಉತ್ಪಾದಿಸುತ್ತಿದ್ದಾರೆ. ರಾಜ್ಯದಲ್ಲಿ ಉತ್ಪಾದನೆಯಾಗುತ್ತಿರುವ ಉಣ್ಣೆಯು ಸ್ವಭಾವತಃ ಒರಟಾಗಿದ್ದು ನವಿರಾದ ಉತ್ಪನ್ನಗಳ ತಯಾರಿಕೆಗೆ ಸೂಕ್ತವಾಗಿರುವುದಿಲ್ಲ. ಈ ಕಾರಣದಿಂದಾಗಿ ಈ ಉತ್ಪನ್ನಗಳಿಗೆ ಸೀಮಿತ ಮಾರುಕಟ್ಟೆಯಿದೆ. ಈ ಉತ್ಪನ್ನಗಳಿಗೆ ಮಲೆನಾಡು ಪ್ರದೇಶಗಳಲ್ಲಿನ ಕಾಫಿ ಮತ್ತು ಚಹಾ ಎಸ್ಟೇಟುಗಳಲ್ಲಿ ಬೇಡಿಕೆಯಿದ್ದು ಇದು ಹವಾಮಾನಾಧಾರಿತ ಬೇಡಿಕೆಯಾಗಿದೆ. ಕೇವಲ ಮಳೆಗಾಲದಲ್ಲಿ ಮಾತ್ರ ಈ ಉತ್ಪನ್ನಗಳಿಗೆ ಬೇಡಿಕೆಯಿರುತ್ತದೆ.
4. **ಕೃತಕ ನೂಲಿನ ಉತ್ಪನ್ನಗಳು** : ಕೃತಕ ನೂಲಿನ ಜವಳಿ ಉತ್ಪನ್ನಗಳಿಗೆ ಉತ್ತಮ ಲಾಭಾಂಶವಿಲ್ಲದಿದ್ದರೂ ಸಹ ನಿರಂತರ ಮಾರುಕಟ್ಟೆಯಿದೆ.

**ಮುನ್ನೋಟ: . . .**
**2020 ರ ವೇಳೆಗೆ. . .**

- ಸುಲಭ ಬೆಲೆಯಲ್ಲಿ ಕಚ್ಚಾಮಾಲನ್ನು ಕೈಮಗ್ಗ ವಲಯಕ್ಕೆ ಒದಗಿಸುವ ಮೂಲಕ ಮಾರುಕಟ್ಟೆಯನ್ನು ಬಲಪಡಿಸಲು ಉದ್ದೇಶಿಸಲಾಗಿದೆ. ಜೊತೆಗೆ ಸರಕುಗಳ ಮಾರಾಟದ ಹಂತದಲ್ಲಿ ಪ್ರೋತ್ಸಾಹ ನೀಡಿ ಉತ್ಪನ್ನಗಳ ಮಾರಾಟವನ್ನು ದ್ವಿಗುಣಗೊಳಿಸಲು ಉದ್ದೇಶಿಸಿದೆ.

## ಮಾರುಕಟ್ಟೆ ಸುಗಮಗೊಳಿಸಲು ಇಲಾಖೆಯಲ್ಲಿರುವ ಕಾರ್ಯಕ್ರಮಗಳು :

### 1. ಕೈಮಗ್ಗ ಉತ್ಪನ್ನಗಳ ಮಾರಾಟದ ಮೇಲೆ ರಿಬೇಟ್ ಯೋಜನೆ.

ರಾಜ್ಯದಲ್ಲಿ ಸಹಕಾರ ವಲಯದ ಹಾಗು ಕೆಹೆಚ್‌ಡಿಸಿ ನಿಗಮದ ಕೈಮಗ್ಗ ನೇಕಾರರ ಉತ್ಪನ್ನಗಳಿಗೆ ಹೆಚ್ಚಿನ ಮಾರುಕಟ್ಟೆ ಒದಗಿಸುವ ಮೂಲಕ ನೇಕಾರರಿಗೆ ನಿರಂತರ ಉದ್ಯೋಗ ಕಲ್ಪಿಸುವುದು ಈ ಯೋಜನೆಯ ಉದ್ದೇಶವಾಗಿದೆ. ನೇಕಾರರ ಉತ್ಪನ್ನಗಳ ಚಿಲ್ಲರೆ ಮಾರಾಟದ ಮೇಲೆ ಗ್ರಾಹಕರಿಗೆ ಶೇ. 20 ರಷ್ಟು ರಿಯಾಯ್ತಿಯನ್ನು ನೀಡಲಾಗುತ್ತಿದ್ದು ಯೋಜನೆಯು ಸಮರ್ಪಕವಾಗಿ ಅನುಷ್ಠಾನವಾಗುತ್ತಿದೆ. ನೇಕಾರರಿಂದ ಹಾಗು ಗ್ರಾಹಕರಿಂದ ಇದಕ್ಕೆ ಉತ್ತಮ ಪ್ರತಿಕ್ರಿಯೆಯೂ ವ್ಯಕ್ತವಾಗುತ್ತಿದೆ. ಯೋಜನೆಯ ಫಲವಾಗಿ ರಾಜ್ಯದ ಕೈಮಗ್ಗ ನೇಕಾರರಿಗೆ ಸಂಘ ಸಂಸ್ಥೆಗಳ ಮೂಲಕ ನಿರಂತರ ಉದ್ಯೋಗ ದೊರಕುತ್ತಿದೆ. ಸುಮಾರು 40000 ನೇಕಾರರ ಕುಟುಂಬಗಳಿಗೆ ಉದ್ಯೋಗ ಒದಗಿಸಿದಂತಾಗಿದೆ. ಇದಲ್ಲದೆ ಗ್ರಾಹಕರಿಗೆ ಕೈಮಗ್ಗದ ಉತ್ಪನ್ನಗಳು ಸುಲಭ ಬೆಲೆಗೆ ದೊರಕುವಲ್ಲಿ ಸಹಕಾರಿಯಾಗಿದೆ. ರಿಯಾಯ್ತಿಯನ್ನು ಕೆಲವು ದಿನಗಳಿಗೆ ಮಾತ್ರ ಸೀಮಿತಗೊಳಿಸಲಾಗಿದೆ.

ಈ ಯೋಜನೆಯ ಅನುಷ್ಠಾನದಿಂದ

- ಕೈಮಗ್ಗ ಉತ್ಪನ್ನಗಳ ಮಾರಾಟದಲ್ಲಿ ಹೆಚ್ಚಳ.
- ನೇಕಾರರಿಗೆ ನಿರಂತರ ಉದ್ಯೋಗ.
- ಗ್ರಾಹಕರಿಗೆ ಸ್ಪರ್ಧಾತ್ಮಕ ಬೆಲೆಯಲ್ಲಿ ಉತ್ತಮ ಗುಣಮಟ್ಟದ ಉತ್ಪನ್ನಗಳ ಲಭ್ಯತೆ.
- ನೇಕಾರರ ಆರ್ಥಿಕ ಪರಿಸ್ಥಿತಿಯಲ್ಲಿ ಸುಧಾರಣೆ.
- ನೇಕಾರರ ಮಜೂರಿಯಲ್ಲಿ ಗಮನಾರ್ಹ ಹೆಚ್ಚಳ.
- ಅವಲಂಬಿತ ಕ್ಷೇತ್ರಗಳಲ್ಲಿ ಉದ್ಯೋಗ ಸೃಷ್ಟಿ.

ಇವೇ ಮುಂತಾದ ಧ್ಯೇಯಗಳನ್ನು ತಲುಪಲಾಗಿದೆ.

**ಯೋಜನೆಯಲ್ಲಿ ತರಬಹುದಾದ ಬದಲಾವಣೆ :** ಯಾವುದೇ ಬದಲಾವಣೆಯಿಲ್ಲದೆ ಯೋಜನೆಯನ್ನು ಮುಂದುವರೆಸುವುದು ಸೂಕ್ತವಾಗಿದೆ. **ರಿಯಾಯ್ತಿಯ ಅವಧಿಯನ್ನು ವಿಸ್ತರಿಸಿ ಹೆಚ್ಚು ದಿನಗಳು ರಿಯಾಯ್ತಿ ನೀಡಲು ಅನುವು ಮಾಡಿಕೊಡಬಹುದಾಗಿದೆ.** ( ನೆರೆಯ ತಮಿಳು ನಾಡು ರಾಜ್ಯದಲ್ಲಿ ಕೈಮಗ್ಗ ಉತ್ಪನ್ನಗಳ ಮಾರಾಟಕ್ಕೆ ಇಡೀ ವರ್ಷ ರಿಯಾಯ್ತಿಯನ್ನು ಸರ್ಕಾರದಿಂದ ಒದಗಿಸಲಾಗುತ್ತಿದೆ.) ಇದರಿಂದ ಕೈಮಗ್ಗ ಉತ್ಪನ್ನಗಳು ಹೆಚ್ಚು ಹೆಚ್ಚು ಮಾರಾಟವಾಗಿ ನೇಕಾರರಿಗೆ ನಿರಂತರ ಉದ್ಯೋಗ ದೊರಕುತ್ತದೆ.

**2. ಕೇಂದ್ರ ಸರ್ಕಾರದ ಕೈಮಗ್ಗ ಲಾಂಛನ ಮತ್ತು ರೇಷ್ಮೆ ಲಾಂಛನ.**

ಕೇಂದ್ರ ಸರ್ಕಾರವು ಜಾರಿಗೆ ತಂದಿರುವ **"**ಕೈಮಗ್ಗ ಲಾಂಛನ**"** (ಹ್ಯಾಂಡ್‌ಲೂಂ ಮಾರ್ಕ್) ಮತ್ತು **"**ರೇಷ್ಮೆ ಲಾಂಛನ**"** (ಸಿಲ್ಕ್ ಮಾರ್ಕ್) ಕಾರ್ಯಕ್ರಮಗಳು ಕೈಮಗ್ಗ ನೇಕಾರರ ಉತ್ಪನ್ನಗಳಿಗೆ ಹೆಚ್ಚು ಮಾರುಕಟ್ಟೆ ಒದಗಿಸುವಲ್ಲಿ ಸಹಕಾರಿಯಾಗಿವೆ. ಇವುಗಳ ಪರಿಣಾಮಕಾರಿ ಅನುಷ್ಠಾನಕ್ಕೆ ಹೆಚ್ಚು ಹೆಚ್ಚು ಪ್ರಚಾರ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು ಅಗತ್ಯವಿದೆ. ಇವುಗಳ ಪ್ರಚಾರಕ್ಕೆ ಹೆಚ್ಚು ಒತ್ತು ನೀಡಲು ಉದ್ದೇಶಿಸಲಾಗಿದೆ. **ಇದರ ಪರಿಣಾಮವಾಗಿ 2020 ರ ವೇಳೆಗೆ ಮಾರುಕಟ್ಟೆಯಲ್ಲಿ ಕೈಮಗ್ಗ ಲಾಂಛನವಿಲ್ಲದ ಬಟ್ಟೆಗಳು ಕೈಮಗ್ಗದ್ದಲ್ಲ ಹಾಗು ರೇಷ್ಮೆ ಲಾಂಛನವಿಲ್ಲದ ಬಟ್ಟೆಗಳು ರೇಷ್ಮೆ ಬಟ್ಟೆಗಳಲ್ಲ ಎಂಬ ಸ್ಥಿತಿ ನಿರ್ಮಾಣ ಮಾಡಲು ಉದ್ದೇಶಿಸಲಾಗಿದೆ.**

**ಯೋಜನೆಯಲ್ಲಿ ತರಬಹುದಾದ ಬದಲಾವಣೆ :** ಕೇಂದ್ರ ಸರ್ಕಾರದ ಯೋಜನೆ. ಬದಲಾವಣೆ ಅವಶ್ಯವಿಲ್ಲ.

**3. ಕೇಂದ್ರ ಸರ್ಕಾರದ ಕೈಮಗ್ಗ ಮೇಳಗಳು.**

ಕೇಂದ್ರ ಸರ್ಕಾರವು ಜಾರಿಗೆ ತಂದು ಅನುಷ್ಠಾನಗೊಳಿಸುತ್ತಿರುವ ರಾಷ್ಟ್ರೀಯ, ರಾಜ್ಯ ಹಾಗು ಜಿಲ್ಲಾ ಮಟ್ಟದ ಕೈಮಗ್ಗ ಮೇಳ ಮತ್ತು ಉತ್ಸವಗಳು ಕೈಮಗ್ಗ ವಸ್ತ್ರೋತ್ಪನ್ನಗಳಿಗೆ ಮಾರುಕಟ್ಟೆ ಒದಗಿಸುವಲ್ಲಿ ಯಶಸ್ವಿಯಾಗಿವೆ. ಇವುಗಳ ಸಂಪೂರ್ಣ ಲಾಭ ಪಡೆದು ಹೆಚ್ಚು ಹೆಚ್ಚು ಮೇಳಗಳನ್ನು ಆಯೋಜಿಸಲು ಉದ್ದೇಶಿಸಲಾಗಿದೆ. ಇದರಿಂದ ಇಂತಹ ಮೇಳಗಳ ಸದವಕಾಶಕ್ಕಾಗಿ ಸಾರ್ವಜನಿಕರು ಕಾತರದಿಂದ ನಿರೀಕ್ಷಿಸುವಂತೆ ಮಾಡಬಹುದಾಗಿದೆ.

**ಯೋಜನೆಯಲ್ಲಿ ತರಬಹುದಾದ ಬದಲಾವಣೆ :** ಕೇಂದ್ರ ಸರ್ಕಾರದ ಯೋಜನೆ. ಬದಲಾವಣೆ ಅವಶ್ಯವಿಲ್ಲ.

# ನೇಕಾರರ ಪ್ರೋತ್ಸಾಹಕ್ಕಾಗಿ ಇನ್ನಿತರ ಸಾಮಾಜಿಕ ಭದ್ರತಾ ಯೋಜನೆಗಳು.

## 1. ಮಹಾತ್ಮಾ ಗಾಂಧಿ ಬುನಕರ್ ಬಿಮ ಯೋಜನೆ

**ಉದ್ದೇಶ:** ನೇಕಾರರಿಗೆ ವಿಮಾ ಸೌಲಭ್ಯವನ್ನು ಒದಗಿಸುವುದು. ಸ್ವಾಭಾವಿಕವಾಗಿ ಅಥವ ಅಫಘಾತದಿಂದ ಮೃತರಾದವರ ವಾರಸುದಾರರಿಗೆ ಹಾಗೂ ಖಾಯಂ ಅಥವ ಭಾಗಶಃ ಅಂಗವಿಕಲರಾದವರಿಗೆ ವಿಮಾ ಪರಿಹಾರ ನೀಡುವುದು. ನೇಕಾರರ ಮಕ್ಕಳಿಗೆ ವಿದ್ಯಾಭ್ಯಾಸಕ್ಕೆ ಉತ್ತೇಜನ ನೀಡುವುದು. ಕೈಮಗ್ಗ ನೇಕಾರರಿಗೆ ವೃತ್ತಿಯಲ್ಲಿ ಮುಂದುವರಿಯಲು ಆಕರ್ಷಣೆ.

**ಯೋಜನೆಯ ಫಲ :**

- ನೇಕಾರರಿಗೆ ಆರ್ಥಿಕ ಭದ್ರತೆ.
- ನೇಕಾರರಿಗೆ ಉದ್ಯೋಗ ಮುಂದುವರೆಸಲು ಪ್ರೋತ್ಸಾಹ.

**ಯೋಜನೆಯಲ್ಲಿ ತರಬಹುದಾದ ಬದಲಾವಣೆ :** ಇದು ಕೇಂದ್ರ ಸರ್ಕಾರದ ಯೋಜನೆಯಾಗಿದ್ದು ಪರಿಣಾಮಕಾರಿಯಾಗಿ ಅನುಷ್ಟಾನವಾಗುತ್ತಿದೆ ಇದರಲ್ಲಿ ಬದಲಾವಣೆ ತರುವುದು ಅವಶ್ಯವಿಲ್ಲ.

## 2. ಆರೋಗ್ಯ ವಿಮಾ ಯೋಜನೆ

**ಉದ್ದೇಶ:** ಕೈಮಗ್ಗ ನೇಕಾರರಿಗೆ ಗುಣ ಮಟ್ಟದ ವೈದ್ಯಕೀಯ ಸೌಲಭ್ಯವನ್ನು ಒದಗಿಸುವುದು. ನೇಕಾರರ ಅತ್ಮಸ್ಥೈರ್ಯ ಹೆಚ್ಚಿಸಿ ದೈಹಿಕವಾಗಿ ಹಾಗೂ ಮಾನಸಿಕವಾಗಿ ಸದೃಡತೆ ಒದಗಿಸುವುದು.

**ಯೋಜನೆಯ ಫಲ :**

- ನೇಕಾರರಿಗೆ ಆರೋಗ್ಯ ಭದ್ರತೆ.
- ಮಾನಸಿಕ ಸ್ಥೈರ್ಯ.
- ಉದ್ಯೋಗ ಮುಂದುವರೆಸಲು ಪ್ರೋತ್ಸಾಹ.

**ಯೋಜನೆಯಲ್ಲಿ ತರಬಹುದಾದ ಬದಲಾವಣೆ :** ಇದು ಕೇಂದ್ರ ಸರ್ಕಾರದ ಯೋಜನೆಯಾಗಿದ್ದು ಪರಿಣಾಮಕಾರಿಯಾಗಿ ಅನುಷ್ಟಾನವಾಗುತ್ತಿದೆ ಇದರಲ್ಲಿ ಬದಲಾವಣೆ ತರುವುದು ಅವಶ್ಯವಿಲ್ಲ.

## 1) **ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ ಮುನ್ನೋಟ.**

ಸಂಸ್ಥೆಯಲ್ಲಿ ಹಾಲಿ ಇರುವ ಉತ್ಪಾದನಾ ನೇಕಾರರನ್ನು ಹೊರತುಪಡಿಸಿ ವಿವಿಧ ಕಾರಣಗಳಿಂದ ವೃತ್ತಿಯಿಂದ ದೂರವಿರುವ ಕೈಮಗ್ಗ ನೇಕಾರರನ್ನು ಪುನಃ ಉತ್ಪಾದನೆಯಲ್ಲಿ ತೊಡಗಿಸಿ ಉದ್ಯೋಗ ಒದಗಿಸಲು ಚಾಲನೆ ನೀಡಲಾಗುವುದು. ಇದಲ್ಲದೆ ಹೊಸದಾಗಿ ಈ ಉದ್ಯೋಗ ಬಯಸುವ ಫಲಾನುಭವಿಗಳನ್ನು ಗುರುತಿಸಿ ತರಬೇತಿ ನೀಡಿ ಉದ್ಯೋಗದಲ್ಲಿ ತೊಡಗಿಸಲು ಪ್ರೋತ್ಸಾಹಿಸಲಾಗುವುದು. ಆ ಮೂಲಕ ಮುಂದಿನ ಮೂರು ವರ್ಷಗಳಲ್ಲಿ **ನಿಗಮದಲ್ಲಿನ ನೇಕಾರರ ಸಂಖ್ಯೆಯನ್ನು 12000 ಕ್ಕೆ ಏರಿಸುವುದು.**

## 2) **ಕರ್ನಾಟಕ ವಿದ್ಯುತ್‌ಮಗ್ಗ ಅಭಿವೃದ್ಧಿ ನಿಗಮದ ಮುನ್ನೋಟ**

ಕರ್ನಾಟಕ ವಿದ್ಯುತ್ ಮಗ್ಗ ಅಭಿವೃದ್ಧಿ ನಿಗಮವು ರಾಜ್ಯದ ವಿದ್ಯುತ್ ಮಗ್ಗ ನೇಕಾರರಿಗೆ ಅಗತ್ಯವಿರುವ ಮೂಲಭೂತ ಸೌಕರ್ಯ ಕಲ್ಪಿಸುವುದು, ಮಾರುಕಟ್ಟೆ ಸೌಲಭ್ಯ ಒದಗಿಸುವುದು, ತಾಂತ್ರಿಕ ಸಲಹೆ ಒದಗಿಸುವುದರ ಮೂಲಕ ಈ ಕ್ಷೇತ್ರದ ಸರ್ವಾಂಗೀಣ ಬೆಳವಣಿಗೆಯ ಉದ್ದೇಶ ಹೊಂದಿದೆ. 2020 ನೇ ಸಾಲಿನ ಒಳಗೆ ಸುವರ್ಣ ವಸ್ತ್ರ ನೀತಿ, ಕೈಗಾರಿಕಾ ವಿಕಾಸ ಯೋಜನೆ, ಕೇಂದ್ರ ಪುರಸ್ಕೃತ ಗುಂಪು ಕಾರ್ಯಾಗಾರ ಯೋಜನೆ, ಗುಂಪು ವಿಮಾ ಯೋಜನೆಗಳ ಮೂಲಕ ವಿದ್ಯುತ್ ಮಗ್ಗ ನೇಕಾರರಿಗೆ ಅಗತ್ಯವಿರುವ ಸಂಪೂರ್ಣ ಮೂಲಬೂತ ಸೌಕರ್ಯಗಳನ್ನು ನಿಗಮದ ಮೂಲಕ ಒದಗಿಸಲಾಗುವುದು. ಎಲ್ಲ ವಿದ್ಯುತ್ ಮಗ್ಗ ನೇಕಾರರನ್ನು ವಿಮಾ ಭದ್ರತೆಗೆ ಒಳಪಡಿಸಿ ಅವರಿಗೆ ಸಾಮಾಜಿಕ ಭದ್ರತೆ ಒದಗಿಸುವುದು. ಮಾರುಕಟ್ಟೆ ಬೇಡಿಕೆ ಸಮೀಕ್ಷೆ ನಡೆಸಿ ಉತ್ತಮ ಬೇಡಿಕೆಯಲ್ಲಿರುವ ಉತ್ಪನ್ನಗಳ ತಯಾರಿಕೆಗೆ ವಿದ್ಯುತ್ ಮಗ್ಗ ನೇಕಾರರಿಗೆ ಸಲಹೆ ನೀಡುವುದು.

# 2020 ನೇ ಸಾಲಿನ ಮುನ್ನೋಟ – ಹೊಸ ಕಾರ್ಯಕ್ರಮಗಳು.

## ಮುಂದಿನ ಮೂರು ವರ್ಷಗಳಲ್ಲಿ ಇಲಾಖೆಯಲ್ಲಿ ಸಾಧಿಸಲು ಗುರುತಿಸಲಾದ ಅಭಿವೃದ್ಧಿ ಕಾರ್ಯಕ್ರಮಗಳ ಮೈಲುಗಲ್ಲುಗಳು.

### 1) ನಿವೇಶನರಹಿತ ನೇಕಾರರಿಗೆ ನಿವೇಶನ ಹಾಗು ವಸತಿ ಒದಗಿಸುವುದು.

ರಾಜ್ಯದ ಅಭಿವೃದ್ದಿಯ ಹಿತದೃಷ್ಟಿಯಿಂದ ಇಲಾಖೆಯ ವ್ಯಾಪ್ತಿಯಲ್ಲದಿ ಬರುವ ನಿವೇಶನ ರಹಿತ ನೇಕಾರರನ್ನು ಗುರುತಿಸಿ, ಅವರಿಗೆ ನಿವೇಶನ ನೀಡಿ ವಸತಿ ಕಾರ್ಯಾಗಾರವನ್ನು ನಿರ್ಮಿಸಿಕೊಡಲಾಗುವುದು. **ಇದರಿಂದ ಮುಂದಿನ 3 ವರ್ಷಗಳಲ್ಲಿ ಎಲ್ಲಾ ನೇಕಾರರಿಗೆ ವಸತಿ ಸೌಲಭ್ಯ ಕಲ್ಪಿಸುವುದು.**

### 2) ನೇಕಾರರ ಕಾಲೋನಿಗಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸುವುದು.

ನೇಕಾರರ ಸಾಂದ್ರತೆ ಇರುವ ಪ್ರದೇಶಗಳನ್ನು ಗುರುತಿಸಿ ಅಗತ್ಯ ಮೂಲಬೂತ ಸೌಕರ್ಯಗಳಾದ ಕುಡಿಯುವ ನೀರು, ರಸ್ತೆ, ಒಳಚರಂಡಿ, ಶೌಚಾಲಯ, ದಾರಿ ದೀಪ ಮುಂತಾದ **ಆಧ್ಯತೆಯ ಮೂಲಭೂತ ಸೌಲಭ್ಯಗಳನ್ನು ಒದಗಿಸುವುದು.** ಇದರಿಂದ ನೇಕಾರರು ವಾಸಿಸುವ ಪರಿಸರವು ಉತ್ತಮಗೊಳ್ಳಲಿದೆ.

### 3) ನೇಕಾರರಿಗೆ/ ಕುಟುಂಬಗಳಿಗೆ ಭಾವಚಿತ್ರಸಹಿತ ಗುರುತಿನ ಚೀಟಿ ಒದಗಿಸುವುದು.

ರಾಜ್ಯದಲ್ಲಿ ನೆಲೆಸಿರುವ ನೇಕಾರರು ಮತ್ತು ಅವರ ಕುಟುಂಬ ವರ್ಗದವರ ಸಂಪೂರ್ಣ ಅಂಕಿಅಂಶಗಳನ್ನು ಕ್ರೂಢೀಕರಿಸಿ ಕ್ರಮಬದ್ಧಗೊಳಿಸಲು ಹೆಸರು, ವಿಳಾಸ, ಅವಲಂಬಿತ ಸಂಖ್ಯೆ ಮತ್ತು ಪೋಟೋ ಸಹಿತ ಮಾಹಿತಿಗಳನ್ನೊಳಗೊಂಡ **ಒಂದೇ ಮಾದರಿಯ ಗುರುತಿನ ಚೀಟಿಯನ್ನು ನೀಡುವುದು.**

### 4) ಜವಳಿ ಘಟಕಗಳಿಗೆ /ವಿದ್ಯುತ್ ಮಗ್ಗ ಘಟಕಗಳಿಗೆ ಜನರೇಟರ್ ಸಹಾಯಧನ.

**ಉದ್ದೇಶ:** ವಿದ್ಯುತ್ ಮಗ್ಗ ನೇಕಾರರು ವಿದ್ಯುತ್ ಅಭಾವದಿಂದಾಗಿ (ಲೋಡ್‌ಶೆಡ್ಡಿಂಗ್) ನಿರಂತರ ಉತ್ಪಾದನೆಯಲ್ಲಿ ಸಮಸ್ಯೆಯನ್ನು ಎದುರಿಸುತ್ತಿದ್ದಾರೆ. ಇದರಿಂದಾಗಿ ನಷ್ಟ ಉಂಟಾಗಿ ಅನೇಕ ನೇಕಾರರು ನೇಕಾರಿಕೆ ವೃತ್ತಿಯನ್ನು ತೊರೆದು ಜೀವನ ನಿರ್ವಹಣೆಗಾಗಿ ಕಷ್ಟಪಡುತ್ತಿದ್ದಾರೆ. ಈಗಾಗಲೇ ನೇಕಾರರಿಗೆ ರಿಯಾಯ್ತಿ ದರದಲ್ಲಿ ವಿದ್ಯುತ್ ನೀಡುತ್ತಿದ್ದರೂ ಸಹ ಅವರ ಅಗತ್ಯಕ್ಕೆ ತಕ್ಕಷ್ಟು ವಿದ್ಯುತ್ ದೊರಕದೆ ಇರುವುದರಿಂದ ನಿರಂತರ ಉತ್ಪಾದನೆ ಕೈಗೊಳ್ಳಲು ಕಷ್ಟಸಾಧ್ಯವಾಗಿರುತ್ತದೆ. ಆದ್ದರಿಂದ ಇಂತಹ **ವಿದ್ಯುತ್ ಮಗ್ಗ ಘಟಕಗಳು ಉತ್ಪಾದನೆಗೆ ಬಳಸಿಕೊಳ್ಳಲು ಖರೀದಿಸಿದ 15 ಕೆವಿಎ ಜನರೇಟರ್ ಮೊತ್ತದ ಮೇಲೆ ಶೇ 75 ರಷ್ಟು ಸಹಾಯಧನ ನೀಡಲು ಉದ್ದೇಶಿಸಿದೆ.**

ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಹಾಗೂ ಅಂಗವಿಕಲ ಉದ್ಯಮಿಗಳು ನಡೆಸುವ ಘಟಕಗಳು ಜನರೇಟರ್ ಖರೀದಿಸಿದಲ್ಲಿ ಶೇ.90 ರಷ್ಟು ಸಹಾಯಧನ ನೀಡಲು ಉದ್ದೇಶಿಸಿದೆ.

**ಯೋಜನೆಯ ಫಲ :** ಈ ಯೋಜನೆಯ ಅನುಷ್ಠಾನದಿಂದ ಜವಳಿ ಘಟಕಗಳಿಗೆ ಅಗತ್ಯವಿರುವ ವಿದ್ಯುತ್‌ನ್ನು ತಾವೇಉತ್ಪಾದಿಸಿಕೊಳ್ಳಲು ಸಾಧ್ಯವಾಗುವುದು ಹಾಗು ಈ ಕ್ಷೇತ್ರಕ್ಕೆ ವಿದ್ಯುತ್‌ಚ್ಛಕ್ತಿ ಕೊರತೆಯ ನಿವಾರಣೆಯಿಂದಾಗಿ ನಿರಂತರ ಉತ್ಪಾದನೆ. ರಾಜ್ಯದ ವಿದ್ಯುತ್ ಉಳಿತಾಯದಲ್ಲಿ ಸಹಕಾರಿಯಾಗುವುದು.

## 5) <u>ಸರ್ಕಾರದಿಂದ ಎನ್‌ಸಿಡಿಸಿ ಯೋಜನೆಯಡಿ ಆರ್ಥಿಕ ಸಹಾಯ ಪಡೆದಿರುವ ರೋಗಗ್ರಸ್ಥ ಸಹಕಾರ ಸಂಘಗಳ ಪುನಶ್ಚೇತನ.</u>

ಎನ್‌ಸಿಡಿಸಿ ಯೋಜನೆಯಡಿ ಆರ್ಥಿಕ ಸಹಾಯ ಪಡೆದಿರುವ ರಾಜ್ಯದ ಹಲವಾರು ನೇಕಾರ ಸಹಕಾರ ಸಂಘಗಳು ಸಕಾಲದಲ್ಲಿ ಸಾಲ ಮರುಪಾವತಿಸಲಾಗದೆ ಸಂಕಷ್ಟದಲ್ಲಿ ಸಿಲುಕಿವೆ. **ಈ ಸಂಘಗಳ ಪುನಶ್ಚೇತನಕ್ಕಾಗಿ ಹೊಸ ಪ್ಯಾಕೇಜ್ ಒಂದನ್ನು ರೂಪಿಸಲಾಗುವುದು.** ಇದಲ್ಲದೆ 11 ನೇ ಪಂಚವಾರ್ಷಿಕ ಯೋಜನೆಯಲ್ಲಿ ಹೊಸ ಎನ್‌ಸಿಡಿಸಿ ಪ್ರಸ್ತಾವನೆಗಳಿಗೆ ಮಂಜೂರಾತಿ ನೀಡಿ ವಿದ್ಯುತ್ ಮಗ್ಗಗಳ ಅಭಿವೃದ್ಧಿಗೆ ಒತ್ತು ನೀಡಲಾಗುವುದು. ಇದರಿಂದ ಈ ಸಂಘಗಳ ಆರ್ಥಿಕಪರಿಸ್ಥಿತಿ ಸುಧಾರಣೆಯಾಗಲಿದ್ದು ಸುಮಾರು 3000 ಪ್ರತ್ಯಕ್ಷ ಹಾಗು 3000 ಪರೋಕ್ಷ ಉದ್ಯೋಗಾವಕಾಶ ಸೃಷ್ಟಿಯಾಗುವುದಲ್ಲದೆ ಎನ್‌ಸಿಡಿಸಿಯ ಸಾಲ ಮರು ಪಾವತಿ ಸುಲಭವಾಗುತ್ತದೆ.

## 6) <u>ಫ್ಯಾಬ್ರಿಕ್ ಬ್ಯಾಂಕ್ ಸ್ಥಾಪನೆ.</u>

ಕೈಮಗ್ಗ ಮತ್ತು ವಿದ್ಯುತ್ ಮಗ್ಗ ನೇಕಾರರಿಗೆ ಮಾರುಕಟ್ಟೆಯಲ್ಲಿ ಬೆಲೆ ಇಳಿತ ಉಂಟಾದಾಗ ಅವರ ಉತ್ಪಾದನೆಗೆ ರಕ್ಷಣೆ ಒದಗಿಸುವುದು ಈ ಯೋಜನೆ ಉದ್ದೇಶವಾಗಿರುತ್ತದೆ. ಕೃಷಿ ಇಲಾಖೆಯಲ್ಲಿ ಕೃಷಿ ಉತ್ಪಾನ್ನಗಳಿಗೆ ನೀಡಲಾಗುತ್ತಿರುವ ಬೆಂಬಲ ಬೆಲೆಯ ಮಾದರಿಯಲ್ಲಿ **ನೇಕಾರರ ಉತ್ಪಾನ್ನಗಳಿಗೆ ಬೆಂಬಲ ಬೆಲೆ ನೀಡಿ ಖರೀದಿಸಿ ನಂತರ ಮಾರುಕಟ್ಟೆಯಲ್ಲಿ ದರ ಏರಿಕೆ ಉಂಟಾಗುವ ಸಮಯದಲ್ಲಿ ಅದನ್ನು ಸರಿದೂಗಿಸುವ ಮೂಲಕ ಸಹಾಯ ಒದಗಿಸಲು ಫ್ಯಾಬ್ರಿಕ್ ಬ್ಯಾಂಕ್ ಸ್ಥಾಪಿಸುವುದು.**

ಈ ಯೋಜನೆಯನ್ನು ಕೈಮಗ್ಗ ಮತ್ತು ಜವಳಿ ಇಲಾಖೆಯಿಂದ ಪಿ.ಪಿ.ಪಿ. ಮಾದರಿಯಲ್ಲಿ ಅಂದರೆ ಪಬ್ಲಿಕ್ ಪ್ರೈವೇಟ್ ಪಾರ್ಟ್‌ನರ್ ಶಿಪ್ ಆಧಾರದ ಮೇಲೆ ನೇಕಾರರ ಸಹಕಾರ ಸಂಘಗಳು/ಸಹಕಾರಿ ಫೆಡರೇಷನ್‌ಗಳ ಮುಖಾಂತರ ಅನುಷ್ಠಾನಗೊಳಿಸಲಾಗುವುದು.

## 7) ನೇಕಾರರ ಪಿಂಚಣಿ ಯೋಜನೆ.

ರಾಜ್ಯದಲ್ಲಿ ಹಿರಿಯ ನಾಗರೀಕರ ಅನುಕೂಲಕ್ಕಾಗಿ ಇರುವ ಸಂಧ್ಯಾಸುರಕ್ಷಾ ಯೋಜನೆಯಡಿ 65 ವರ್ಷ ಮೀರಿದ ನೇಕಾರರು ಮಾತ್ರ ಪ್ರಯೋಜನ ಪಡೆಯಬಹುದಾಗಿದೆ. ನೇಕಾರರಿಕೆ ವೃತ್ತಿಯು ಅಂತ್ಯಂತ ದೈಹಿಕ ಶ್ರಮದ ವೃತ್ತಿಯಾಗಿದ್ದು, 60 ವರ್ಷದ ನಂತರ ಈ ವೃತ್ತಿಯನ್ನು ಮುಂದುವರಿಸಲು ನೇಕಾರರು ಅಸಮರ್ಥರಾಗುತ್ತಾರೆ. ಈ ಹಿನ್ನೆಲೆಯಲ್ಲಿ ಕೈಮಗ್ಗ ಮತ್ತು ಜವಳಿ ಇಲಾಖೆಯ ವತಿಯಿಂದ ವಿಶೇಷವಾಗಿ **60 ವರ್ಷ ಮೀರಿದ ನೇಕಾರರಿಗೆ ಪಿಂಚಣಿ ಯೋಜನೆಯನ್ನು ಜಾರಿಗೊಳಿಸುವುದು**. ಇದರಿಂದ ಹಿರಿಯ ನೇಕಾರರಿಗೆ ಮತ್ತು ಅವಲಂಬಿತರಿಗೆ ಅವರ ಇಳಿ ವಯಸ್ಸಿನಲ್ಲಿ ಜೀವನದ ಭದ್ರತೆ ಒದಗಿಸಿದಂತೆ ಆಗುತ್ತದೆ.

## 8) ಹೊಸ ನೇಕಾರರ ಸಹಕಾರ ಸಂಘಗಳ ನೊಂದಣಿ.

ಸಹಕಾರಿ ಕ್ಷೇತ್ರದಲ್ಲಿ ಹೆಚ್ಚಿನ ಬೆಳವಣಿಗೆಯನ್ನು ಹೊಂದಲು ಹಾಗೂ ಅಸಂಘಟಿತ ವಲಯದ ನೇಕಾರರನ್ನು ಸಂಘಟಿಸಿ ಸಹಕಾರ ಸಂಘಗಳ ಮೂಲಕ ಸರ್ಕಾರದ ಸೌಲಭ್ಯಗಳನ್ನು ಒದಗಿಸಲು ನೇಕಾರರ ಸಾಂದ್ರತೆ ಇರುವ ಪ್ರದೇಶಗಳಲ್ಲಿ ಮುಂದಿನ ಮೂರು ವರ್ಷಗಳ ಅವಧಿಯಲ್ಲಿ **50 ಹೊಸ ನೇಕಾರರ ಸಹಕಾರ ಸಂಘಗಳನ್ನು ಸ್ಥಾಪಿಸಲಾಗುವುದು, ಹಾಗೂ ಆರ್ಥಿಕ ದೌರ್ಬಲ್ಯದಿಂದಾಗಿ ನಿಷ್ಕ್ರಿಯವಾಗಿರುವ 50 ನೇಕಾರರ ಸಹಕಾರ ಸಂಘಗಳನ್ನು ಪುಶ್ಚೇತನಗೊಳಿಸಲಾಗುವುದು**. ಇದರಿಂದ ನೇಕಾರರು ಸಂಘಟಿತರಾಗಿ ಅವರ ವೃತ್ತಿ ಜೀವನವನ್ನು ಮುಂದುವರಿಸಲು ನೆರವಾಗುವುದು.

## 9) ರಾಜ್ಯಮಟ್ಟದಲ್ಲಿ ಕೈಮಗ್ಗ ಮತ್ತು ಜವಳಿ ಇಲಾಖೆಗೆ ಜವಳಿ ಭವನ ಸ್ವಂತ ಕಟ್ಟಡ ನಿರ್ಮಾಣ.

ಕೈಮಗ್ಗ ಮತ್ತು ಜವಳಿ ಇಲಾಖೆಯು ಅಭಿವೃದ್ಧಿ ಹೊಂದುತ್ತಿರುವ ತಾಂತ್ರಿಕ ಇಲಾಖೆಯಾಗಿರುತ್ತದೆ. ಪ್ರಸ್ತುತದಲ್ಲಿ ರಾಜ್ಯ ಮಟ್ಟದ ಕೇಂದ್ರ ಕಛೇರಿಯು ಖಾಸಗಿ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿದೆ ಇದರಿಂದ ಪ್ರತಿ ವರ್ಷ ಕಟ್ಟಡದ ಬಾಡಿಗೆ ಬಾಬ್ತು ರೂ. 53.00 ಲಕ್ಷಗಳು ಸರ್ಕಾರದ ಬೊಕ್ಕಸಕ್ಕೆ ಹೊರೆಯಾಗಿರುತ್ತದೆ. ಅಲ್ಲದೇ ಖಾಸಗಿ ಕಟ್ಟಡದಲ್ಲಿ ಆಧುನಿಕರಣದಂತ ಕಾಮಗಾರಿಗಳಿಗೆ ಸರ್ಕಾರದ ಅನುದಾನದಿಂದ ವೆಚ್ಚ ಭರಿಸುವುದು ಅನವಶ್ಯ ವೆಚ್ಚವಾಗಲಿದೆ. ಆದ್ದರಿಂದ **ಕೈಮಗ್ಗ ಮತ್ತು ಜವಳಿ ಇಲಾಖೆಗೆ ತನ್ನದೇ ಆದ ಒಂದು ಸ್ವಂತ ಕಟ್ಟಡವನ್ನು "ಜವಳಿ ಭವನ" ಎಂಬ ಹೆಸರಿನಲ್ಲಿ ನಿರ್ಮಿಸುವುದು**. ಇದಕ್ಕೆ ಬೇಕಾದ ನಿವೇಶನವನ್ನು ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ ಆಡಳಿತ ಕಛೇರಿ ಇರುವ ಹಲಸೂರು ಇಲ್ಲಿ ಲಭ್ಯವಿರುವ ಅಥವಾ ಬೆಂಗಳೂರು ನಗರದ ಓಕಳೀಪುರಂ ಸಮೀಪ ಕೇಂದ್ರ ರೇಷ್ಮೆ ಮಂಡಳಿ ಮತ್ತು ರಾಜ್ಯ ರೇಷ್ಮೆ ಇಲಾಖೆ ಇರುವ ಆವರಣ ನಿವೇಶನದಲ್ಲಿ ನಿರ್ಮಿಸಬಹುದಾಗಿದೆ.

## ಮುಂದಿನ ಹತ್ತು ವರ್ಷಗಳಲ್ಲಿ ಇಲಾಖೆಯಲ್ಲಿ ಸಾಧಿಸಲು ಗುರುತಿಸಲಾದ ಅಭಿವೃದ್ಧಿ ಕಾರ್ಯಕ್ರಮಗಳ ಮೈಲುಗಲ್ಲುಗಳು.

### 1) ಉಣ್ಣೆ ಸಂಶೋಧನಾ ಕೇಂದ್ರ ಸ್ಥಾಪನೆ.

ಕರ್ನಾಟಕ ರಾಜ್ಯವು ಉಣ್ಣೆ ಉತ್ಪನ್ನಗಳಿಗೆ ಹೆಸರುವಾಸಿಯಾಗಿದ್ದು ಹಾಲಿ ಹೆಚ್ಚಿನ ನೇಕಾರರು ಕೇವಲ ಎಸ್ಟೇಟ್ ಮಾದರಿಯ ಒರಟು ಕಂಬಳಿಗಳನ್ನು ಮಾತ್ರ ಉತ್ಪದಿಸುತ್ತಿದ್ದಾರೆ. ಈ ಉತ್ಪನ್ನಗಳಿಗೆ ಮಾರುಕಟ್ಟೆ ಬೇಡಿಕೆಯು ಅನಿಶ್ಚಿತವಾಗಿದ್ದು ನೇಕಾರರು ಸಂಕಷ್ಟದಲ್ಲಿದ್ದಾರೆ. ರಾಜ್ಯದಲ್ಲಿ ಉತ್ಪಾದನೆಯಾಗುವ ಉಣ್ಣೆಯು ಒರಟು ಸ್ವಭಾವದ ಉಣ್ಣೆಯಾಗಿದ್ದು ಇದರಿಂದ ಉತ್ಪಾದನೆಯಲ್ಲಿ ವೈವಿಧ್ಯತೆ ಇರುವುದಿಲ್ಲ. ಈ ಹಿನ್ನೆಲೆಯಲ್ಲಿ **ಉಣ್ಣೆ ಕ್ಷೇತ್ರದಲ್ಲಿ ಕ್ರಾಂತಿಕಾರಿ ಬದಲಾವಣೆಗಳನ್ನು ತರಲು ಉಣ್ಣೆ ಸಂಶೋದನಾ ಕೇಂದ್ರವನ್ನು ಸ್ಥಾಪಿಸಲಾಗುವುದು.** ಇದರಿಂದ ರಾಜ್ಯದ ಉಣ್ಣೆ ನೇಕಾರರಿಗೆ ಮಾರುಕಟ್ಟೆ ಬಲಪಡಿಸಿದಂತಾಗಿ ಅವರ ಆರ್ಥಿಕ ಮಟ್ಟ ಸುಧಾರಣೆ ಆಗುತ್ತದೆ.

### 2) ಸರ್ಕಾರದಿಂದ ಎನ್‌ಸಿಡಿಸಿ ಯೋಜನೆಯಡಿ ಆರ್ಥಿಕ ಸಹಾಯ ಪಡೆದಿರುವ ರೋಗಗ್ರಸ್ಥ ಸಹಕಾರ ಸಂಘಗಳ ಪುನಶ್ಚೇತನ.

ಎನ್‌ಸಿಡಿಸಿ ಯೋಜನೆಯಡಿ ಆರ್ಥಿಕ ಸಹಾಯ ಪಡೆದಿರುವ ರಾಜ್ಯದ ಹಲವಾರು ನೇಕಾರ ಸಹಕಾರ ಸಂಘಗಳು ಸಕಾಲದಲ್ಲಿ ಸಾಲ ಮರುಕಪಾವತಿಸಲಾಗದೆ ಸಂಕಷ್ಟದಲ್ಲಿ ಸಿಲುಕಿವೆ. **ಈ ಸಂಘಗಳ ಪುನಶ್ಚೇತನಕ್ಕಾಗಿ ಹೊಸ ಪ್ಯಾಕೇಜ್ ಒಂದನ್ನು ರೂಪಿಸಲಾಗುವುದು.** ಇದಲ್ಲದೆ 11 ನೇ ಪಂಚವಾರ್ಷಿಕ ಯೋಜನೆಯಲ್ಲಿ ಹೊಸ ಎನ್‌ಸಿಡಿಸಿ ಪ್ರಸ್ತಾವನೆಗಳಿಗೆ ಮಂಜೂರಾತಿ ನೀಡಿ ವಿದ್ಯುತ್ ಮಗ್ಗಗಳ ಅಭಿವೃದ್ಧಿಗೆ ಒತ್ತು ನೀಡಲಾಗುವುದು. ಇದರಿಂದ ಈ ಸಂಘಗಳ ಆರ್ಥಿಕಪರಿಸ್ಥಿತಿ ಸುಧಾರಣೆಯಾಗಿಲಿದ್ದು ಸುಮಾರು 3000 ಪ್ರತ್ಯಕ್ಷ ಹಾಗು 3000 ಪರೋಕ್ಷ ಉದ್ಯೋಗಾವಕಾಶ ಸೃಷ್ಟಿಯಾಗುವುದಲ್ಲದೆ ಎನ್‌ಸಿಡಿಸಿಯ ಸಾಲ ಮರು ಪಾವತಿ ಸುಲಭವಾಗುತ್ತದೆ.

### 3) ಜವಳಿ ಸಂಶೋಧನಾ ಹಾಗು ಪರೀಕ್ಷಾ ಕೇಂದ್ರ ಸ್ಥಾಪನೆ.

ಕರ್ನಾಟಕ ರಾಜ್ಯದಲ್ಲಿ ಜವಳಿ ಕ್ಷೇತ್ರವು ಕ್ಷಿಪ್ರಗತಿಯಲ್ಲಿ ಪ್ರಗತಿ ಸಾಧಿಸುತ್ತಿದ್ದು ರಾಷ್ಟ್ರೀಯ ಮತ್ತು ಅಂತರ್‌ರಾಷ್ಟ್ರೀಯ ಮಟ್ಟದಲ್ಲಿ ಸ್ವರ್ಧಾತ್ಮಕ ಪರಿಸರವನ್ನು ಉಂಟುಮಾಡಲು **ಜವಳಿ ಸಂಶೋದನಾ ಹಾಗೂ ಪರೀಕ್ಷಾ ಕೇಂದ್ರವನ್ನು ಸ್ಥಾಪಿಸಲಾಗುವುದು.** ಇದರಿಂದಾಗಿ ಉತ್ಪಾದನೆಯ ಗುಣಮಟ್ಟ ಸುಧಾರಿಸಲು ಸಾಧ್ಯವಾಗುತ್ತದೆ.

**4) <u>ಕರ್ನಾಟಕ ರಾಜ್ಯ ಉಣ್ಣೆ ಸಹಕಾರ ಮಹಾಮಂಡಳ ಮತ್ತು ಕಾವೇರಿ ಹ್ಯಾಂಡ್ ಲೂಮ್ಸ್ ಸಂಸ್ಥೆಗಳ ಪುನ:ಶ್ಚೇತನ.</u>**

ಕರ್ನಾಟಕ ರಾಜ್ಯ ಉಣ್ಣೆ ಸಹಕಾರ ಮಹಾಮಂಡಳ ಮತ್ತು ಕಾವೇರಿ ಹ್ಯಾಂಡ್ ಲೂಮ್ಸ್ ಸಂಸ್ಥೆಗಳು ಆರ್ಥಿಕವಾಗಿ ದುರ್ಬಲವಾಗಿ ಈ ಮಹಾಮಂಡಳಿಗಳು ಸ್ಥಾಪಿತವಾದ ಉದ್ದೇಶ ಸಫಲವಾಗಿರುವುದಿಲ್ಲ. **ಈ ಸಂಸ್ಥೆಗಳಿಗೆ ದುಡಿಮೆ ಬಂಡವಾಳದ ಅವಶ್ಯಕತೆ ಇದ್ದು ಇವುಗಳ ಪುನಶ್ಚೇತನಕ್ಕೆ ಪ್ಯಾಕೇಜನ್ನು ರೂಪಿಸಲಾಗುವುದು.**

**5) <u>ಸಹಕಾರಿ ನೂಲಿನ ಗಿರಣಿಗಳ ಪುನ:ಶ್ಚೇತನ.</u>**

ರಾಜ್ಯದ ಸಹಕಾರಿ ನೂಲಿನ ಗಿರಣಿಗಳು ಆರ್ಥಿಕವಾಗಿ ಸಂಕಷ್ಟದಲ್ಲಿ ಸಿಲುಕಿವೆ. **ಈ ನೂಲಿನ ಗಿರಣಿಗಳ ಪುನಶ್ಚೇತನಕ್ಕಾಗಿ ಹೊಸ ಪ್ಯಾಕೇಜ್ ಒಂದನ್ನು ರೂಪಿಸಲಾಗುವುದು.** ಇದರಿಂದ ಈ ನೂಲಿನ ಗಿರಣಿಗಳ ಆರ್ಥಿಕ ಪರಿಸ್ಥಿತಿ ಸುಧಾರಣೆಯಾಗಿಲಿದ್ದು ಹೆಚ್ಚಿನ ಉದ್ಯೋಗಾವಕಾಶ ಸೃಷ್ಟಿಯಾಗುವುದಲ್ಲದೆ ರಾಜ್ಯದ ನೇಕಾರರಿಗೆ ನಿರಂತರ ಕಚ್ಚಾಮಾಲು ಪೂರೈಸಲು ಸಾಧ್ಯವಾಗುತ್ತದೆ.